ಶ್ರೀ ಎಂ. ವೀರಪ್ಪಮೊಯ್ಲಿ.—ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ವ್ಯವಸ್ಥಿತವಾಗಿದೆ ಯಾವುದೇ ರೀತಿಯ ಬರಗಾಲ ಬರಲಿ, ಎಂತಹ ಕಷ್ಟಪರಿಸ್ಥಿತಿ ಬಂದರೂ ಮಾನ್ಯ ಗುಂಡೂರಾಯರ ಸರ್ಕಾರಕ್ಕೆ ಭದ್ರ ಎದೆಗಾರಿಕೆ ಇದೆ ಎಂದು ನಾನು ಹೇಳುತ್ತೇನೆ. ಈ ಬಗ್ಗೆ ಯಾರೂ ಸಂಶಯಪಡ ಬಾರದೆಂದು ಈ ಮೂಲಕ ಹೇಳುತ್ತೇನೆ.

ಅಧ್ಯಕ್ಷರು.—ಈಗ ಕಾಲ ಕಡಿಮೆ ಇರುವುದರಿಂದ ಇಂದಿನ ಎರಡು ಗಮನ ಸೆಳೆಯುವ ಸೂಚನೆ ಗಳನ್ನು ನಾಳೆ ಪ್ರಸ್ತಾಪಕ್ಕೆ ತೆಗೆದುಕೊಳ್ಳುವುದಕ್ಕೆ ಸಭೆಯ ಒಪ್ಪಿಗೆಯನ್ನು ಈ ಮೂಲಕ ಕೇಳುತ್ತಿದ್ದೇನೆ. ಈ ದಿನ ನಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಕಾಗಿದೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ನಡೆದ ಪರೀಕ್ಷಾ ದಿಗ್ಬಂಧನದ ಬಗ್ಗೆ ನನ್ನದೊಂದು ಗಮನ ಸೆಳೆಯುವ ಸೂಚನೆ ಇದೆ.

SRI PRABHAKAR TELKAR.—I had given notice with regard to Gulbarga University not holding the examinations and the same is being entrusted to Karnatak University.

ಶ್ರೀ ಜಿ.ಬಿ. ಶಂಕರ್‌ರಾವ್.—ಇಲ್ಲಿ ಎರಡು ವಿಷಯಗಳು ಅಡಕವಾಗಿರುವುದರಿಂದ ನಾನು ಬೇರೆ ಬೇರೆ ಎರಡು ಹೇಳಿಕೆಯನ್ನು ಕೊಡಲಿದ್ದೇನೆ.

Motion of Thank's to the Governors Adderss

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ ಇಂದು ಈಗ ವಾತಾವರಣ ಪ್ರಶಾಂತವಾಯಿತು. ಕಳೆದ ಎರಡು ಗಂಟೆಗಳಿಂದ ವಿರೋಧ ಪಕ್ಷದ ಕಡೆಯಿಂದ ಜಡಿಮಳೆ, ಗುಡುಗಿನ ಆರ್ಭಟ ಕೇಳಿಬರುತ್ತಿತ್ತು. ಈ ಕಡೆಯಿಂದ ಒಂದು ಸಿಡಿಲು ಹೊಡೆದ ತಕ್ಷಣ ಪರಿಸ್ಥಿತಿ ಶಾಂತವಾಯಿತು.

(ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಮಾತನಾಡುವುದಕ್ಕೆನಮಗೆ ಅವಕಾಶ ಸಿಕ್ಕಿತು. ರೈತರ ಕಡೆ ಕಳಕಳಿಯಿಂದ ಮಾತನಾಡುತ್ತಿದ್ದ ಆ ಕಡೆಯ ಸದಸ್ಯರಿಗೆ ಈದಿನ ಮಾನ್ಯ ಮುಖ್ಯ ಮಂತ್ರಿಗಳು ಇದು ರೈತರ ಹೆಸರು ಹೇಳಿಕೊಂಡು ರಾಜಕೀಯ ಮಾಡಿ ಕೊಂಡುಬಂದಿರತಕ್ಕಂತಹ ಜಾಥ ಎಂದು ಹೇಳಿದಾಗ ಯಾರಿಗೆ ತಪಕ ಇತ್ತೋ ಅವರು ಸಭೆಯನ್ನು ಬಿಟ್ಟು ಹೊರಕ್ಕೆ ಹೋದರು. ಕೆಲವು ವಿರೋಧ ಪಕ್ಷದ ಸದಸ್ಯರು, ಜನತಾ ಪಕ್ಷದವರು ನಮ್ಮೊಡನೆ ಸಹಕರಿಸಿ ಇಲ್ಲಿ ಕುಳಿತುಕೊಂಡಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳನ್ನು ಸೂಚಿಸುತ್ತೇನೆ. ೨೮ನೇ ಜನವರಿಯಲ್ಲಿ. ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ ನನಗೂ ಇಲ್ಲಿ ಚರ್ಚೆಗೆ ಅವಕಾಶ ಸಿಕ್ಕಿದೆ. ಆದರೆ ಈ ಒಂದು ಅಧಿವೇಶನ ಸೇರುವುದಕ್ಕಿಂತ ಮುಂಚೆ ಈ ಸಭೆ ನಡೆಯುತ್ತದೆಯೇ ಹೇಗೆ ಎಂಬ ಭಾವನೆ ಇತ್ತು. ಅಧಿವೇಶನಕ್ಕೆ ಘೇರಾವ್ ಮಾಡುತ್ತೇವೆ, ಅಧಿವೇಶನ ನಡೆಯುವುದಕ್ಕೆ ಬಿಟ್ಟುಕೊಡುವುದಿಲ್ಲ, ರಾಜ್ಯಪಾಲರ ಭಾಷಣಕ್ಕೆ ಅಡ್ಡಿ ಮಾಡುತ್ತೇವೆ ಎಂದೆಲ್ಲಾ ಪ್ರಚಾರವನ್ನು ಹಬ್ಬಿಸಿದರು. ನಾವುಗಳು ವಾಪಸ್ ಊರಿಗೆ ಹೋಗುತ್ತೇವೆಯೋ ಇಲ್ಲವೋ ಎಂಬ ಭಯ ನಮ್ಮಲ್ಲಿ ಹುಟ್ಟಿತ್ತು.

೪–೩೦ ಪಿ.ಎಂ.

ಆದರೆ ಈವೊತ್ತು ಇವೆಲ್ಲಕ್ಕೂ ವಿಗಿಲಾಗಿ ಇಲ್ಲಿ ೨೨೪ ಜನ ಶಾಸಕರು ಏನು ಇದ್ದಾರೆ ರಾಜ್ಯದ ೩ ಕೋಟಿ ಪ್ರಜಾಸಂಖ್ಯೆಯ ಪ್ರತಿನಿಧಿಗಳಾಗಿರತಕ್ಕಂಥಾ ಈ ಶಾಸಕರು ಏನು ಇದ್ದಾರೆ ಅವರಿಗೆ ರಾಜ್ಯದ ಆಗುಹೋಗುಗಳನ್ನು ವಿಚಾರ ಮಾಡತಕ್ಕಂಥಾ ಅಧಿಕಾರ ಇದೆ. ಹೀಗಿರುವಾಗ ಇದನ್ನು ಕಂಡು ರಾಜ್ಯದ ಜನತೆಗೆ ಗೌರವ ತರತಕ್ಕಂಥಾ ರೀತಿಯಲ್ಲಿ ಯಾವ ರೀತಿಯಾದ ಧಕ್ಕೆಯೂ ಬರದಂತೆ, ಅದಕ್ಕೆ ಯಾವ ಅಡ್ಡಿ ಆಡಚಣೆಗಳು ಇಲ್ಲದ ರೀತಿಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಸಲು ನಮ್ಮ ಮುಖ್ಯಮಂತ್ರಿಗಳು ಇಂದು ಅವಕಾಶ ಮಾಡಿಕೊಟ್ಟಿದ್ದಾರೆ, ಅಲ್ಲದೆ ಈ ಬಗ್ಗೆ ನಮ್ಮ ಶಾಸಕರಿಗೂ ಸಹ ಒಂದಂ ರಕ್ಷಣೆಯನ್ನು ಕೊಟ್ಟಿದ್ದಾರೆ, ಅದಕ್ಕಾಗಿ ನಮ್ಮ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸಿ

ತ್ತೇನೆ. ಈವೊತ್ತಿನ ಪರಿಸ್ಥಿತಿಯಲ್ಲಿ ಭಾರತ ಎತ್ತ ಸಾಗುತ್ತಿದೆ ಎನ್ನುವುದನ್ನು ರಾಜಕೀಯ ಮುಂಖಂಡರು ಯೋಚನೆ ಮಾಡಬೇಕಾದುದು ಬಹಳ ಮುಖ್ಯವಾದುದು. ೧೯೪೭ನೇ ಇಸವಿಯಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಪಾಕಿಸ್ತಾನ, ಇಂಡೋನೇಷ್ಯಾ, ಬರ್ಮ ನಂತರ ಬಾಂಗ್ಲಾ ದೇಶಕ್ಕೂ ಕೂಡ ಸ್ವಾತಂತ್ರ್ಯ ಬಂದು ಅವುಗಳು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿ ಸ್ಥಾಪನೆಯಾದವು. ಆದರೆ ಇವೊತ್ತು ಆ ರಾಜ್ಯಗಳಲ್ಲಿ ದಂಗೆ ಆಗಿ ರಕ್ತಪಾತ ಹರಿದು ಪ್ರಜಾಪ್ರಭುತ್ವ ಅಳಿಸಿ ಅಲ್ಲಿ ಮಿಲಿಟರಿ ಸರ್ಕಾರಗಳು ಆಡಳಿತ ನಡೆಸುತ್ತಾ ಇವೆ. ಈಗ ನಮ್ಮ ದೇಶದಲ್ಲಿ ನಡೆಯುತ್ತಾ ಇರತಕ್ಕಂಥಾ ಕಾರ್ಯವನ್ನು ನೋಡಿದರೆ ನಾವು ಎಲ್ಲಿ ಅವರ ಸಮೀಪಕ್ಕೆ ಹೋಗುತ್ತಾ ಇದ್ದೇವೆಯೋ ಎನ್ನುವ ಒಂದು ಭ್ರಮೆ ಆಗುತ್ತಿದೆ. ರಾಷ್ಟ್ರದ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಮುಖಂಡರುಗಳೆಲ್ಲಾ ಸೇರಿ ಈ ದೇಶವನ್ನು ಒಂದು ಪ್ರಬುದ್ಧ ಮಾನಕ್ಕೆ ತರಬೇಕಾಗಿದೆ. ಈ ಕೆಲಸ ನ್ಯಾಯಯುತವಾಗಿ ಆಗಬೇಕಾಗಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ ಆಧ್ಯಕ್ಷರೇ, ಈವೊತ್ತಿನ ನಮ್ಮ ಸಭೆಯಲ್ಲಿ ಒಂದು ತರಹ ಬಣ್ಣ ಬಣ್ಣದ ಸನ್ನಿವೇಶ ಕಾಣುತಿತ್ತು. ಕೆಲವರು ಹಸಿರು ಪೇಟ, ಹಾಕಿಕೊಂಡಿದ್ದರು. ಕೆಲವರು ಕೆಂಪು ಪೇಟ ಹಾಕಿಕೊಂಡಿದ್ದರು, ಇನ್ನು ಕೆಲವರು ರೈತರ ಅಪ್ಪನಂಥಾ ಅಪ್ಪನಂಥಾ ಪೇಟ ಹಾಕಿಕೊಂಡಿದ್ದರು. ನೋಡುವುದಕ್ಕೆ ಚೆನ್ನಾಗಿ ಕಾಣಿಸುತ್ತಿತ್ತು. ನಿನ್ನೆ ದಿವಸ ಮಾನ್ಯ ಎ. ಜಿ. ಕೊಡಗಿಯವರು ಮಾತನಾಡುತ್ತಾ ಒಂದು ಮಾತು ಹೇಳಿದರು. ಅದೇನೆಂದರೆ ಶ್ರೀಮಾನ್ ಗುಂಡೂರಾಯರ ನಾಟಕದ ಕಂಪನಿಯಲ್ಲಿ ಶ್ರೀಮಾನ್ ವೀರಪ್ಪಮೊಯ್ಲಿ ಅವರು ಖಳನಾಯಕ ಪಾತ್ರವನ್ನು ವಹಿಸಿದ್ದಾರೆ ಎಂದು. ಅದೇ ರೀತಿ ೧೯೭೪ನೇ ಇಸವಿಯಲ್ಲಿ ಶ್ರೀಮಾನ್ ಡಿ. ದೇವರಾಜ ಅರಸ್ ಸರ್ಕಾರ ಇದ್ದಾಗ ಶ್ರೀಮತಿ ಇಂದಿರಾಗಾಂಧಿಯವರ ಕೃಪಾ ಪೋಷಿತ ನಾಟಕ ಮಂಡಲಿ ಅಂತ ಅವರ ಬಗ್ಗೆ ಈ ಸಭೆಯಲ್ಲಿ ಹೇಳಿದ್ದು ಜ್ಞಾಪಕ ಇದೆ, ಅದೇ ರೀತಿ ನಿಜಲಿಂಗಪ್ಪ ಥ್ರೀ ರಿಂಗ್ ಸರ್ಕಸ್ ಪ್ರೈವೇಟ್ ಅನ್‌ಲಿಮಿಟೆಡ್ ಅಂತ ಹೇಳಿದ್ದೂ ಇದೆ. ಯಾವಾಗಲೂ ಶ್ರೀಮಾನ್ ಎ.ಜಿ. ಕೊಡಗಿಯವರು ಭಾಷಣ ಮಾಡಬೇಕಾದರೆ ಕೈ ಕುಣಿಸಿಕೊಂಡು ತಮ್ಮ ಹಾವಭಾವ ತೋರಿಸಿ ಯಕ್ಷಗಾನ ಮಾಡುವವರ ಹಾಗೆ ಮಾಡುತ್ತಾರೆ. ಅದು ಸ್ವಾಭಾವಿಕ. ಆದರೆ ಅವರು ಯಾವ ಚೆಲ್ಲಾಪಿಲ್ಲಿ ಯಕ್ಷಗಾನದಲ್ಲಿದ್ದಾರೋ ಅದನ್ನು ನಾವು ಅರಿತುಕೊಳ್ಳಬೇಕಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಲಾಗಾಯ್ತು ಸುಮಾರು ೩೦ ವರ್ಷಗಳಿಂದಲೂ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಾ ಇತ್ತು. ಸಾಮಾನ್ಯವಾಗಿ ಮನುಷ್ಯನ ಸ್ವಭಾವ ದಂತೆ ಸ್ವಲ್ಪ ಬದಲಾವಣೆಯಾಗುವುದು ಸ್ವಾಭಾವಿಕ. ಅದೇ ರೀತಿ people want some change in food, environment, atmosphere and even in sex.

SRI H. SHIVAPPA.—Do you have any experience in change of sex.

ಶ್ರೀ ಗಟ್ಟಿ ಚಂದ್ರಶೇಖರ್,—ನೀವು ಈಗ ಈ ಸಭೆಗೆ ಬಂದು ಒಂದು ವರ್ಷವಾಗಿದೆ ಅಷ್ಟೆ. ಮುಂದೆ ನಿಮಗೆ ಎಕ್ಸ್‌ಪೀರಿಯನ್ಸ್ ಆಗುತ್ತದೆ. ಅದರ ಬಗ್ಗೆ ಈಗ ಬೇಡ. ನಂತರ ಏನಾಯಿತು ಎಂದರೆ ಜನ ನೋಡಿ ನೋಡಿ, ೩೦ ವರ್ಷದಿಂದಲೂ ಒಂದೇ ಸರ್ಕಾರ ಆಡಳಿತ ನಡೆಸುತ್ತಾ ಇದ್ದುದನ್ನು ನೋಡಿ ನೋಡಿ ಬೇಸತ್ತು ೧೯೭೭ನೇ ಇಸವಿಯಲ್ಲಿ ೫ ಪಕ್ಷಗಳೂ ಕೂಡಿದಂಥಾ ಜನತಾ ಸರ್ಕಾರವನ್ನು ಆರಿಸಿ, ಇಡೀ ದೇಶದಲ್ಲಿ ಅದನ್ನು ಸ್ಥಾಪನೆ ಮಾಡಿ ಅವರ ಕೈಗೆ ಅಧಿಕಾರ ಕೊಟ್ಟರು. ಆಗಲೇ ಈ ೫ ಪಕ್ಷಗಳು ಒಟ್ಟಿಗೆ ಸೇರಿದಾಗಲೇ ನನಗೆ ಅನುಮಾನವಾಯಿತು, ಇದು ೫ ದಾರಿಯಾಗುತ್ತದೆ ಎಂದು. ಕೊನೆಗೂ ಹಾಗೆಯೇ ಆಯಿತು. ೨½ ವರ್ಷದಲ್ಲಿ ದೇವರಾಜ ಅರಸ್ ಸರ್ಕಾರ ಇದ್ದಾಗ ಅನೇಕ ಕಮೀಷನ್‌ಗಳು ಆಯಿತು. ಇದರ ಜೊತೆಗೆ ಕೇಂದ್ರ ಸರ್ಕಾರದಲ್ಲೂ ಕೆಲವು ಕಮೀಷನ್‌ಗಳು ಸ್ಥಾಪನೆಯಾಗಿ ಇಂಧಿರಾ ಗಾಂಧಿಯವರನ್ನೂ ಮತ್ತು ಸಂಜಯ ಗಾಂಧಿಯವರನ್ನೂ ಜೈಲಿಗೆ ಕಳುಹಿಸಲು ಅನೇಕ ಕಟ್ಟಲೆಗಳನ್ನು ಹಾಕಿದರು. ಕೊನೆಗೆ ಜನರಿಗೆ ಬೇಜಾರಾಗಿ ಬೇಸತ್ತು ಪುನಃ ೧೯೮೦ನೇ ಇಸವಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಬಿಟ್ಟರೆ ಬೇರೆ ಯಾರೂ ಕೂಡ ಇಲ್ಲಿ ಆಡಳಿತ ನಡೆಸುವುದಕ್ಕಾಗುವುದಿಲ್ಲ ಎಂದು ಆ ಜನರು ತಿಳಿದುಕೊಂಡು ಮತ್ತೆ ಅವರೇ ಬರುವ ಹಾಗೆ ಆ ಪಕ್ಷಕ್ಕೇನೇ ಓಟು ಕೊಟ್ಟು ಅವರನ್ನು ಅಧಿಕಾರದಲ್ಲಿ ಕೂರಿಸಿದ್ದಾರೆ. ಇಷ್ಟಾದರೂ ಕೂಡ ವಿರೋಧ ಪಕ್ಷದವರಿಗೆ ಸ್ವಲ್ಪವಾದರೂ ಬುದ್ಧಿ ಬಂದ ಹಾಗೆ ಕಾಣಲಿಲ್ಲಾ. ಅವರಿಗೆ ಮೊದಲು ಏನು ಅಧಿಕಾರ ಬಂದಿತ್ತು ಅದು ವಾಪಸ್ಸು ಸಿಕ್ಕುವುದಿಲ್ಲ, ಛಾನ್ಸ್ ಕಳೆದುಕೊಂಡು ಬಿಟ್ಟರು, ಛಾನ್ಸ್ ಹೋಯಿತು ಎಂದು ಹೇಳುತ್ತೇನೆ ಮುಂದೆ ಏನಾಗುತ್ತದೆ ಎಂದರೆ A drowning man will catch-hold of a straw ಆದ ಹಾಗೆ ಆಗುತ್ತದೆ. ೩೦ ವರ್ಷದಿಂದಲೂ ರೈತರ ಪೇಟ ಮಲಗಿದ್ದಂತೆ ಆವಾಗ ಇವರು ಅವರನ್ನು ಎಬ್ಬಿಸಲಿಲ್ಲ, ಇವರೂ ಕೂಡ ಆಗ ಮಲಗಿಕೊಂಡಿದ್ದರು,

ಈಗ ಆ ರೈತರು ಎದ್ದಿದ್ದಾರೆ ಅಂತ ಹೇಳಿ, ಅವರ ಜೊತೆಗೆ ಇವರೂ ಸಹ ಎಬ್ಬಿಸಿದ್ದಾರೆ. ಅವರ ಪೇಟ ಮಲಗಿದ್ದಾಗ ಇವರು ಏಳಿಸುವುದಕ್ಕೆ ಹೋಗಲಿಲ್ಲ, ಅವರು ಈಗ ಎದ್ದಿದ್ದಾರೆ ಅಂತ ಹೇಳಿ ಇವರೇ ಈಗ ಎದ್ದುಕೊಂಡು ಹೋಗಿದ್ದಾರೆ. ನಮ್ಮ ದೇಶದಲ್ಲಿ ನಿಷ್ಠಾವಂತ ರಾಜಕಾರಣಿಗಳು ಈಗಲೂ ಇದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಯಾರೋ ಒಬ್ಬರು ಇಬ್ಬರು ನಿಷ್ಠಾವಂತ ರಾಜಕಾರಿಣಿಗಳು ಇದ್ದರೆ, ಅವರನ್ನು ಹಿಡಿಯುವುದಕ್ಕೆ ಹೋಗುತ್ತಾರೆ. ಎಲ್ಲರೂ ಕೆಟ್ಟವರು ಅಂತ ನಾನು ಹೇಳುವುದಿಲ್ಲ. ಒಬ್ಬಿಬ್ಬರು ಇರುತ್ತಾರೆ ಅವರನ್ನು ಹಿಡಿಯುವುದಕ್ಕೆ ಹೋಗುವುದಿಲ್ಲ. ಈಪೊತ್ತು ಅಂಥಾ ಒಂದು ಪರಿಸ್ಥಿತಿ ಬಂದಿದೆ. ದೇಶದ ಹಿತದೃಷ್ಟಿಯಿಂದ ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಯಬೇಕಾದರೆ ಬಹಳ ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ, ನಾನು ಈ ಮಾತನ್ನು ಹೇಳಿದರೆ ತಾವು ನಮ್ಮ ಮುಖ್ಯಮಂತ್ರಿಗಳನ್ನು ಹೊಗಳುತ್ತಾರೆ ಎಂದು ತಿಳಿದುಕೊಳ್ಳಬೇಡಿ. ನಾನು ಅವರನ್ನು ಹೊಗಳುವುದಕ್ಕೆ ಹೋಗುವುದಿಲ್ಲ. ನಿಜಸ್ಥಿತಿ ಹೇಳಬೇಕಾದ್ದು ನಮ್ಮ ಧರ್ಮ. ಅವರು ಮಾಡತಕ್ಕಂಥಾ ಒಳ್ಳೆಯ ಕಾರ್ಯವನ್ನು ಕೆಲವು ವಿರೋಧಪಕ್ಷದವರು ರಾಜಕೀಯ ಬಣ್ಣವಾಗಿ ಮಾಡಿದ್ದಾರೆ.

ಶ್ರೀ ಪಿ. ರಾಂದೇವ್,—ಮೊದಲು ಮೊದಲು ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಆವಾಗ ನೀವು ಆ ಪಕ್ಷದಲ್ಲಿದ್ದಾಗ ಅವರನ್ನು ಹೊಗಳಿದಿರಿ, ಈಗ ಶ್ರೀಮಾನ್ ಗುಂಡೂರಾಯರ ಪಕ್ಷದಲ್ಲಿ ನೀವು ಇರುವುದರಿಂದ ಈಗ ಅವರನ್ನು ತಾವು ಹೊಗಳುತ್ತಾ ಇದ್ದೀರಿ. ಈಗ ಮೊದಲಿದ್ದವರನ್ನು ಬೈದು ಇವರನ್ನು ಹೊಗಳುತ್ತಾ ಇದ್ದೀರಲ್ಲಾ ಇದು ಯಾವ ರೀತಿ ನ್ಯಾಯ ?

ಶ್ರೀ ಗಟ್ಟಿ ಚಂದ್ರಶೇಖರ್.—ಮದುವೆ ಆಗದೇ ಇದ್ದವರಿಗೆ ಇದರ ಅನುಭವ ಗೊತ್ತಿಲ್ಲ, ಇದರ ತಾರತಮ್ಯ ಗೊತ್ತಾಗುವುದಿಲ್ಲ. ಆವಾಗ ನಾನು ದೇವರಾಜ ಅರಸ್‌ರವರನ್ನು ಹೊಗಳಿರಲಿಲ್ಲ. ಮನುಷ್ಯ ಏನು ಮಾಡುತ್ತಾನೆ ಎಂದರೆ, ಚಳಿಗಾಲ ಇದ್ದಾಗ ಚಳಿ ಚಳಿ ಅಹ್ಹಹ್ಹಾ ಚಳಿ ಚಳಿ ಎನ್ನುತ್ತಾನೆ. ಬೇಸಿಗೆ ಆದಾಗ ಅಬ್ಬಬ್ಬಾ ಅಬ್ಬಬ್ಬಾ ಒಳ್ಳೆ ಬೇಸಿಗೆ ಬಂತಲ್ಲ ಎನ್ನುತ್ತಾನೆ. ಹಾಗೆ ನಾನು ಗುಂಡೂರಾಯರನ್ನು ಹೊಗಳುತ್ತಾ ಇಲ್ಲ. ಮುಖ್ಯ ಮಂತ್ರಿಗಳು ಮಾಡಿರತಕ್ಕಂಥಾ ಕೆಲಸಕಾರ್ಯಗಳ ಬಗೆ ಹೊಗಳುತ್ತಾ ಇದ್ದೇನೆ. ಈಗ ತಾವು ಒಬ್ಬರೇ ಇದ್ದೀರಿ, ಪರ್ಮನೆಂಟ್ ಆಗಿ ಯಾರನ್ನಾದರೂ ಒಬ್ಬರನ್ನು ಮದುವೆ ಮಾಡಿಕೊಳ್ಳಿ ಇಲ್ಲವೇ ಟೆಂಪರರಿಯಾಗಿಯಾದರೂ ಮದುವೆ ಮಾಡಿಕೊಳ್ಳಿ ಗೊತ್ತಾಗುತ್ತದೆ. ಹಾಗಾದರೆ ನಾನು ಹೆಚ್ಚು ಹೊಗಳಬೇಕಾದ ಅವಶ್ಯಕತೆ ಇರುವುದಿಲ್ಲ.

ಶ್ರೀ ಹೆಚ್. ಶಿವಣ್ಣ.—ಟೆಂಪರರಿಯಾಗಿಯಾದರೂ ಮದುವೆ ಮಾಡಿಕೊಳ್ಳಿ ಎಂದು ಹೇಳಿದರಲ್ಲಾ. ಹಾಗಾದರೆ ಅವರು ಟೆಂಪರರಿಯಾಗಿಯೇ ಇರಬೇಕು ಅಂತ ಹೇಳುತ್ತೀರಾ ? ಇದು ನಿಮ್ಮ ಅನುಭವವೇ ?

ಶ್ರೀ ಗಟ್ಟಿ ಚಂದ್ರಶೇಖರ್.—ನಿಮ್ಮ ಅನುಭವ ಹೇಗೆ ಇದೆಯೋ ಆ ರೀತಿ ತಿಳಿದುಕೊಳ್ಳಿ. ೧೯೭೨ನೇ ಇಸವಿಯಿಂದ ೮ ವರ್ಷಗಳ ಕಾಲ ಶ್ರೀಮಾನ್ ಡಿ. ದೇವರಾಜ ಅರಸ್ ಸರ್ಕಾರ ಇದ್ದಾಗ ಈಗಿನ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ಗುಂಡೂರಾಯರು ಅವರ ಸರ್ಕಾರದಲ್ಲಿದ್ದಾಗ ಶ್ರೀಮಾನ್ ಅರಸ್‌ರವರೇ ಅವರನ್ನು ಆಧುನಿಕ ಕರ್ಣ ಎಂದು ಹೊಗಳಿದ್ದಾರೆ. ಮತ್ತೇನೂ ನಾನು ಬೇರೆ ಹೊಗಳಬೇಕಾಗಿಲ್ಲ. ಏತಕ್ಕೆ ಹಾಗೆ ಹೊಗಳಿದ್ದಾರೆ ಎಂದರೆ, ಅವರ ಕರುಣೆ ನಮ್ಮ ಕರ್ನಾಟಕ ರಾಜ್ಯದ ಜನತೆಗೆ ಸಿಕ್ಕಿರುವುದು ಒಂದು ಸೌಭಾಗ್ಯ ಎಂದು ಅವರನ್ನು ಹೊಗಳಿದ್ದಾರೆ.

ಇನ್ನು ನಮ್ಮ ಇನ್ನೊಬ್ಬ ಮಾನ್ಯ ಸದಸ್ಯರಾದ ಶ್ರೀಮಾನ್ ಡಿ.ಟಿ. ರಾಮುರವರು ಮಾತನಾಡಿದಾಗ ಆಡಳಿತದಲ್ಲಿರುವ ಸ್ವಚ್ಛತೆ ಮಂತ್ತು ದಕ್ಷತೆಯ ಬಗ್ಗೆ ಹೇಳಿದರು. ಹಾಗೆಯೇ ಇನ್ನೊಬ್ಬ ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಇವರನ್ನು ಲಕ್ಷ್ಮೀಪುತ್ರರು ಅಂತ ಏನು ಹೇಳಿದ್ದಾರೆ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ, ಅವರು ಏನೇನು ಒಳ್ಳೊಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಅವೆಲ್ಲಾ ಪೇಪರ್‌ನಲ್ಲಿ ಬಂದಿದೆ, ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ, ಈಗ ಒಬ್ಬ ಮನುಷ್ಯ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಾನೆ ಎಂದು ಇಟ್ಟುಕೊಳ್ಳೋಣ. ಅವರು ಅಲ್ಲಿ ಇದ್ದಂಥಾ, ಇನ್ನೊಬ್ಬರು ಬಿಟ್ಟು ಹೋಗಿದ್ದಂಥಾ ಕಸ, ಕೊಳೆಯನ್ನು ಕಿತ್ತು ಹಾಕಿ ತಾನು ಹೇಗೆ ಸರಿಯಾಗಿ ಇಟ್ಟುಕೊಳ್ಳುತ್ತಾನೋ ಹಾಗೆಯೇ ಸರ್ಕಾರವೂ ಕೂಡ ಒಂದು ಬಾಡಿಗೆ ಮನೆ ಇದ್ದ ಹಾಗೆ. ಹಾಗೆ ೫ ವರ್ಷಕ್ಕೊಮ್ಮೆ ಒಂದೊಂದು ಮಂತ್ರಿಮಂಡಲ ಹೊಸದಾಗಿ ಬರಬೇಕು. ೩೦ ವರ್ಷದಿಂದಲೂ ಯಾವ ಯಾವ ಮಂತ್ರಿಮಂಡಲಗಳು ಬಂದು ಏನೇನು ಕಿತ್ತು ಹಾಕಿ ಪಜೀತಿ ಮಾಡಿದ್ದರು ಅದನ್ನೆಲ್ಲಾ ಈಗ ಸರಿಪಡಿಸುವುದಕ್ಕೆ, ಅದನ್ನು ಒಳ್ಳೆಯ ದಾರಿಯಲ್ಲಿ

ತರುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಈ ಒಂದು ವರ್ಷದಲ್ಲಿ ಅವರು ಆದಷ್ಟು ಮಟ್ಟಿಗೆ ಒಳ್ಳೆಯ ಕೆಲಸಕಾರ್ಯಗಳನ್ನು ರಾಜ್ಯದ ಜನತೆಗೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಅವರು ಈ ಬಗ್ಗೆ ಏನು ಒಂದು ಅಭಿಪ್ರಾಯ ಇಟ್ಟುಕೊಂಡಿದ್ದರು ಆ ಬಗ್ಗೆ ನಾನು ಅವೊತ್ತೇ ಅವರಿಗೆ ಹೇಳಿದೆ. ಏನು ಹೇಳಿದೆ ಎಂದರೆ ಜಾನ್ ಕೆನಡಿ ಹೇಳಿದ ಹಾಗೆ I should not think what the country will do for me. I should think what I can do for the country ಎಂದು. ಆ ರೀತಿ ಯೋಚನೆ ಮಾಡಿ ಕಾರ್ಯಗತ ಮಾಡುತ್ತಿದ್ದಾರೆ. ತಮಗೆ ಹೇಳಬೇಕಾದರೆ ಈ ರೈತರ ಬಗ್ಗೆ ಏನೇನು ರಿಯಾಯಿತಿಗಳನ್ನು ಮಾಡಿದ್ದಾರೆ ಎಂದರೆ, ೧೦ ಎಕರೆಯವರೆಗೂ ಕೂಡ ಕಂದಾಯ ಕೊಡಬೇಕಾಗಿಲ್ಲ ಅಂತ ಮಾಡಿದ್ದಾರೆ, ಮತ್ತು ಕೃಷಿ ಉತ್ಪನ್ನದ ಮೇಲೆ ಒಂದು ಬೆಳೆಯ ಆಧಾರದ ಮೇಲೆ ನೀರಾವರಿ ಇಲ್ಲದ ಕಡೆ ಪಂಪುಸೆಟ್ಸ್ ಇರುವ ಕಡೆ ಬೆಳೆಯತಕ್ಕಂಥಾ ಬೆಳೆಯ ಆಧಾರದ ಮೇಲೆ, ೧೦ ಅಶ್ವಶಕ್ತಿ ಇರುವವರೆಗೂ ಕೂಡ ಏನೇನು ರಿಯಾಯಿತಿಗಳನ್ನು ಕೊಡಬೇಕು ಅವನ್ನೆಲ್ಲಾ ಪ್ರಕಟಣೆ ಮಾಡಿದ್ದಾರೆ. ಇದರ ಜೊತೆಗೆ ಸಣ್ಣ ಸಣ್ಣ ರೈತರಿಗೆ ಇನ್ನೂ ಅನೇಕ ವಿಧವಾದ ರಿಯಾಯಿತಿ ಮತ್ತು ಅನುಕೂಲತೆಗಳನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಕೊಟ್ಟು ಅವರೆಲ್ಲರ ಪ್ರೀತಿಗೆ ಇಂದು ಪಾತ್ರರಾಗಿದ್ದಾರೆ ಅನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೈತರ ಚಳುವಳಿಯ ಬಗ್ಗೆ ಎರಡು ಕಡೆಯ ಸದಸ್ಯರು ಸಾಕಷ್ಟು ಮಾತನಾಡಿದ್ದಾರೆ. ಅವರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಎಸ್ಟಿಮೇಟ್ ಕಮಿಟಿಯ ಜೊತೆಯಲ್ಲಿ ಘಟಪ್ರಭಾ, ಮಲಪ್ರಭಾ ಪ್ರದೇಶಗಳಿಗೆ ಹೋಗಿದ್ದೆ. ನಾನು ವಿಷಯ ತಿಳಿದುಕೊಂಡ ಹಾಗೆ ಸುಮಾರು ೬೦, ೭೦ ಲಕ್ಷ ರೂಪಾಯಿಗಳಷ್ಟು ವಾಟರ್ ರೇಟ್ ಬಾಕಿ ರೈತರಿಂದ ಬರಬೇಕಾಗಿತ್ತು. ಯಾರೂ ಕೊಡುವ ಪರಿಸ್ಥಿತಿಯಲ್ಲಿರಲಿಲ್ಲ. ಸಣ್ಣ ರೈತರು ಬಾಕಿಯನ್ನು ಕೊಟ್ಟಿದ್ದಾರೆ. ದೊಡ್ಡವರು ಅಂದರೆ ಶ್ರೀಮಂತರು ಉಳಿಸಿಕೊಂಡಿದ್ದಾರೆ, ಇದರ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಂಡು ವಜಾ ಮಾಡಬಹುದಾಗಿತ್ತು. ಆಗ ಅವರಿಗೆ ೧೬೫ ಶಾಸಕರ ಬೆಂಬಲವಿತ್ತು. ರೈತರು ಕೊಡತಕ್ಕಂತಹ ವಾಟರ್ ರೇಟ್ ಮತ್ತು ಅಭಿವೃದ್ಧಿ ತೆರಿಗೆಯನ್ನು ವಜಾ ಮಾಡಬಹುದಾಗಿತ್ತು, ಅವರು ಏನೂ ಮಾಡಲಿಲ್ಲ.

ಶ್ರೀ ಪಿ. ರಾಮದೇವ್.—ಮಾನ್ಯ ಸದಸ್ಯರು ರೈತರೇ ?

ಶ್ರೀ ಗಟ್ಟಿ ಚಂದ್ರಶೇಖರ್.—ನಮ್ಮ ಊರಿನಲ್ಲಿ ರೈತರು ಇದ್ದಾರೆ. ನೇಗಿಲು ಹೇಗಿದೆ ಎಂಬುದನ್ನು ನಾನು ಮುಟ್ಟಿ ನೋಡಿಲ್ಲ. ನಮಗೂ ೬ ಎಕರೆ ಹೊಲ ಇದೆ, ನಾವುಂತೂ ಉಳುಮೆ ಮಾಡುತ್ತಿಲ್ಲ.

ಇನ್ನು ಮೆಡಿಕಲ್ ಕಾಲೇಜುಗಳ ಬಗ್ಗೆ ಏನೇನೋ ಗಲಾಟೆ ನಡೆಯುತ್ತಿದೆ. ಹರಿಜನರಿಗೆ ಕೊಟ್ಟವರ್ಗೇ, ಒಕ್ಕಲಿಗರಿಗೆ ಕೊಟ್ಟವರ್ಗೇ ಮತ್ತು ಲಿಂಗಾಯಿತರಿಗೆ ಕೊಟ್ಟವರ್ಗೇ ಹೀಗೆ ಒಂದೊಂದು ಜಾತಿಗೂ ಮೆಡಿಕಲ್ ಕಾಲೇಜುಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ, ಎಂದು ೧೦–೧೫ ಜನ ಡಾಕ್ಟರುಗಳು ಬಂದು ನನ್ನ ಹತ್ತಿರ ಚರ್ಚೆ ಮಾಡಿದರು. ಖಾಸಗೀ ಮೆಡಿಕಲ್ ಕಾಲೇಜಿನವರು ಒಂದು ಸೀಟಿಗೆ ಲಕ್ಷಾಂತರ ರೂಪಾಯಿ ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇಂತಹ ಕಾಲೇಜುಗಳನ್ನು ಕೆಲವು ಸಂಘಸಂಸ್ಥೆಗಳವರು ನಡೆಸುತ್ತಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಬರುತ್ತದೆ ಎಂದು ಹೇಳಿದರು. ಆಗ ನಾನು ನಮಗೆ ಡಾಕ್ಟರುಗಳ ಕೊರತೆ ಇದೆ, ನೀವು ಹಳ್ಳಿಗಳಿಗೆ ಹೋಗಿ ಯಾತಕ್ಕೆ ಕೆಲಸ ಮಾಡಬಾರದು ಎಂದು ಕೇಳಿದೆ. ಆಗ ಅವರು ಹಳ್ಳಿಗಳಲ್ಲಿ ಮನೆಗಳ ಮತ್ತು ಇತರ ಅನಾನುಕೂಲ ಇರುತ್ತದೆಂದು ಹೇಳಿದರು. ಇವತ್ತು ಹಳ್ಳಿಗಳಲ್ಲಿ ಡಾಕ್ಟರುಗಳಿಲ್ಲದೆ ಬಹಳ ತೊಂದರೆಯಾಗಿದೆ. ಎಂ.ಎಸ್. ರಾಮಯ್ಯನವರ ಕಾಲೇಜಿನಲ್ಲಿ ಇರುವ ೧೦೦ ಸೀಟುಗಳಲ್ಲಿ ಕೇವಲ ಮೂರು ಸೀಟುಗಳನ್ನು ಮಾತ್ರ ನಮ್ಮವರಿಗೆ ಕೊಟ್ಟು, ಉಳಿದ ಸೀಟುಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆಂದು ಹೇಳಿದರು, ಇದು ಸರಿಯಾದ ಮಾರ್ಗವಲ್ಲ. ಇವತ್ತು ನಾವು ಒಬ್ಬ ಡಾಕ್ಟರನ್ನು ತಯಾರು ಮಾಡಬೇಕಾದರೆ ೧½ ಲಕ್ಷ ಖರ್ಚುಬರುತ್ತದೆ. ನಾವು ಸೀಟುಗಳನ್ನು ಬೇರೆಯವರಿಗೆ ಕೊಡುವುದರಿಂದ ಅವರು ಡಿಗ್ರಿ ಪಡೆದು ಹೊರಗಡೆ ಹೋಗುತ್ತಾರೆ. ಆಗ ನಮ್ಮ ರಾಜ್ಯಕ್ಕೆ ಅನಾನುಕೂಲವಾಗುತ್ತದೆ.

ಶ್ರೀ ಪಿ. ರಾಮದೇವ್.—ಒಬ್ಬ ಡಾಕ್ಟರನ್ನು ತಯಾರು ಮಾಡಬೇಕಾದರೆ ೭ ಲಕ್ಷ ರೂ.ಗಳಂ ಖರ್ಚು ಬರುತ್ತದೆ.

ಶ್ರೀ ಗಟ್ಟಿಚಂದ್ರಶೇಖರ್.—ಮಾನ್ಯ ಸದಸ್ಯರಾದ ರಾಮದೇವ್‌ರವರು ಅಂಕಿಅಂಶಗಳನ್ನು ಕೊಡುವುದರಲ್ಲಿ ಬಹಳ ನಿಪುಣರು. ನಾನು ಒಂದು ಸಲ ನಮ್ಮರಾಜ್ಯದಲ್ಲಿ ಪ್ರಾಸಿಕ್ಯೂಟ್ಸ್ ೧೦ ಸಾವಿರ ಜನ ಇದ್ದಾರೆಂದು ಹೇಳಿದಾಗ, ಅವರು ೩೦ ಸಾವಿರ ಎಂದು ಕರೆಕ್ಟ್ ಫಿಗರ್ಸ್ ಹೇಳಿದರು. ಅವರಿಗೆ ಈ ವಿಷಯ ಹೇಗೆ ಗೊತ್ತು ?. ಆಂಧ್ರಪ್ರದೇಶದಲ್ಲಿ ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ, ಕರ್ನಾಟಕದಲ್ಲೂ ಅದೇರೀತಿ ಮಾಡಿಯೆಂದು ಕೆಲವರು ಹೇಳಿದ್ದಾರೆ. ಇನ್ನು ಬೊಮ್ಮಾಯಿ ಕಮಿಟಿ ಮತ್ತು ಬಂಗಾರಪ್ಪನವರ ಕಮಿಟಿಯ ವರದಿಯನ್ನು ಏನೆನೋ ಮಾಡಿದ್ದಾರೆ, ಅದನ್ನು ನಿರೋದ್ ಬಳಸಿಕೊಂಡಹಾಗೆ ಬಳಸಿಕೊಂಡು ಬಿಸಾಡಿದ್ದಾರೆ ಎಂದು ಶ್ರೀ ಜೆ.ಎಚ್. ಪಟೇಲರು ಹೇಳಿದರು ಅವರ ಅನುಭವದ ಮಾತು ಹೇಳಿದ್ದಾರೆ, ಅವರ ಅನುಭವ ಏನೆಂದು ಕೇಳೋಣ ?. ಬೊಮ್ಮಾಯಿಯವರು ಈ ಸಭೆಯಲ್ಲಿ ಈಗ ಇಲ್ಲ, ಅವರು ಜನತಾ ಪಾರ್ಟಿಯ ಹೊಸ ಅಧ್ಯಕ್ಷರಾಗಿದ್ದಾರೆ. ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದರ ಅರ್ಥವೇನು ಎಂದು ಕೇಳಬಹುದಾಗಿತ್ತು. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್‌ರವರಿಗೆ ಹೇಳುತ್ತೇನೆ. ಗುಂಡೂರಾಯರ ಸರ್ಕಾರ ಪಕ್ಷಾಂತರಿಗಳ ಸರ್ಕಾರ ಎಂದು ಹೇಳಿದರು, ಅದು ಸರಿಯಲ್ಲ. ನಾವು ಪಕ್ಷಾಂತರಿಗಳಲ್ಲ. ಈ ಕಡೆ ಇದ್ದವರು ಆ ಕಡೆ ಹೋಗಿದ್ದೆವು. ಈಗ ಈ ಕಡೆ ಬಂದಿದ್ದೇವೆ. ಆದ್ದರಿಂದ ನಾವು ಪಕ್ಷಾಂತರಿಗಳಲ್ಲ.

ಶ್ರೀ ಪಿ. ರಾಮದೇವ್.—ತಾವು ಹೋಗುವುದರ ಜೊತೆಗೆ ಬೇರೆಯವರನ್ನು ಕರೆಯುತ್ತಿದ್ದೀರಿ ? ಇದು ಸರಿಯೇ ?.

ಶ್ರೀ ಗಟ್ಟಿಚಂದ್ರಶೇಖರ್.—ಮಾನ್ಯ ಸದಸ್ಯರಾದ ರಾಮದೇವ್‌ರವರು ಇನ್ನೂ ಈ ಕಡೆ ಬಂದಿಲ್ಲ, ಆದ್ದರಿಂದ ನನಗೆ ಆ ಬಗ್ಗೆ ಬಹಳ ವ್ಯಥೆ. ಸ್ವಾತಂತ್ರ್ಯ ಬಂದಮೇಲೆ ೧೯೭೭ನೇ ಇಸವಿಯಲ್ಲಿ (ಒ) ಕಾಂಗ್ರೆಸ್ ಇತ್ತು ಅದು ಜನತಾದಲ್ಲಿ ವರ್ಜ್ ಆಯಿತು. ಆದ್ದರಿಂದ ಯಾರು ಪಕ್ಷಾಂತರಿಗಳು, ಯಾರು ಪಕ್ಷಾಂತರಿಗಳಲ್ಲ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಪೋಲೀಸಿನವರ ಬಗ್ಗೆ ಅನೇಕ ಆಪಾದನೆಗಳು ದೂರುಗಳನ್ನು ಹೇಳಿದರು, ಚರ್ಚೆ ನಡೆಯಿತು. ಅವರ ಬಗ್ಗೆ ಕನಿಕರ ಇರಬೇಕು. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್‌ರವರು ಹೇಳಿದ್ದರು ಪ್ರತಿಯೊಂದಕ್ಕೂ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತಾ ಹೋದರೆ ಡಿಮಾರಲೈಸ್ ಆಗುತ್ತದೆ ಎಂದು. ವಿರೋಧಪಕ್ಷದವರು ಕೂಡ ಪೋಲೀಸಿನವರ ಬಗ್ಗೆ ಆಪಾದನೆ ಮಾಡುವುದು ಸರಿಯಲ್ಲ. ರೇಪ್ ಮಾಡಿದವರ ಮೇಲೆ ಪೋಲೀಸಿನವರು ರೇಪ್ ಕೇಸ್ ಹಾಕುತ್ತಿದ್ದರು. ಪತ್ರಿಕೆಗಳವರು ಅವರ ಬಗ್ಗೆ ಏನೆನೋ ಬರೆಯುವುದಕ್ಕೆ ಶುರು ಮಾಡಿದಾಗ ಅವರೇ ರೇಪ್ ಮಾಡುವುದಕ್ಕೆ ಶುರು ಮಾಡಿದರು. ಗಲಾಟೆಯಾದಾಗ ರಕ್ಷಣೆ ಕೊಡಬೇಕು. ಕಲ್ಲು ಹೊಡೆಯುವುದನ್ನು ತಪ್ಪಿಸುವುದಕ್ಕೆ ಲಾಟಿಚಾರ್ಜ್ ಮಾಡಬೇಕಾಗುತ್ತದೆ. ನಾನು ಹೋದವಾರ ಊರಿಗೆ ಹೋಗಿದ್ದೆ. ಗಂಡಹೆಂಡತಿ ಇಬ್ಬರಿಗೂ ಪಾಸ್ ಇದ್ದದ್ದರಿಂದ ಇಬ್ಬರೂ ಕೂಡ ಹೋಗಿದ್ದೆವು. ಬೆಂಗಳೂರಿನಿಂದ ತುಮಕೂರಿಗೆ ಹೋದಾಗ ಬಸ್ಸುಗಳಿಗೆ ಕಲ್ಲುಗಳನ್ನು ಹೊಡೆಯುತ್ತಿದ್ದರು. ನಾವು ಊರಿಗೆ ತಲುಪುತ್ತೇನೆಯೋ ಇಲ್ಲವೋ ಎನ್ನುವ ಅನುಮಾನ ಬಂತು. ಡ್ರೈವರ್ ಬುದ್ಧಿವಂತಿಕೆಯಿಂದ ಬೇರೆ ರಸ್ತೆಯಲ್ಲಿ ಬಸ್ಸನ್ನು ತಿರುಗಿಸಿಕೊಂಡು ಡಿಪೋ ಕಡೆ ಬಂದು ನಮಗೆ ಕಲ್ಲು ಬೀಳುತ್ತಿದ್ದುದನ್ನು ತಪ್ಪಿಸಿದ. ತಕ್ಷಣ ಪೋಲೀಸಿನವರು ಬಂದು ರಕ್ಷಣೆ ಕೊಟ್ಟರು ನಮ್ಮ ಬಸ್ಸಿನಲ್ಲಿ ಕುಳಿತಿದ್ದವರು ಒಬ್ಬ ನನ್ನ ಕಡೆ ಕೈ ತೋರಿಸಿ ಇವರು ಗುಬ್ಬಿ ಶಾಸಕರು ಎಂದು ಗುರುತಿಸಿಬಿಟ್ಟರು. ಆ ದಿನ ಮಕ್ಕಳ ದಿನಾಚರಣೆಯಾದುದರಿಂದ ನನ್ನ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ ಕಾರಣ, ನಾನು ಹೋಗಲೇಬೇಕಾಗಿತ್ತು. ಪೋಲೀಸಿನವರು ಒಳ್ಳೆಯ ಕೆಲಸ ಮಾಡಿದರೂ ಕೂಡ ಅವರನ್ನು ಟೀಕಿಸುವುದು ಸರಿಯಲ್ಲ. ಅವರು ಆ ದಿನ ಇಲ್ಲದಿದ್ದರೆ ನಮಗೆ ಕಲ್ಲುಗಳ ಸುರಿಮಳೆಯಾಗುತ್ತಿತ್ತು. ಈಗ ಬೆಂಗಳೂರು ನಗರದಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕಂತಹ ಒಳ್ಳೆಯ ಪೋಲೀಸ್ ಕಮಿಷನರನ್ನು ಹಾಕಿದ್ದಾರೆ.

ಶ್ರೀ ಪಿ. ರಾಮದೇವ್.—ಪೋಲೀಸಿನವರ ವೈಶಿಷ್ಟ್ಯವೇನೆಂದರೆ, ಅವರೇ ಕಲ್ಲು ಹೊಡೆಯುತ್ತಿದ್ದಾರೆ ಅವರೇ ರೇಪ್ ಮಾಡುತ್ತಿದ್ದಾರೆ ಇವುಗಳೆಲ್ಲಾ ಪತ್ರಿಕೆಯಲ್ಲಿ ಬಂದಿದೆ ಅಲ್ಲದೆ ಮೊನ್ನೆ ಎಚ್.ಎ.ಎಲ್. ಹತ್ತಿರ ಒಂದು ಮನೆಗೆ ನುಗ್ಗಿ ಹೆಂಗಸರು ಮಕ್ಕಳನ್ನು ಹೊಡೆದಿದ್ದಾರೆ. ಆದರ ಬಗ್ಗೆ ಪೋಲೀಸ್ ಕಮಿಷನರ್‌ರವರು ವಿಷಾದ ವ್ಯಕ್ತಪಡಿಸಿ ಕ್ಷಮಾಪಣೆ ಕೇಳಿದ್ದಾರೆ. ಇದೆಲ್ಲಾ ನಡೆಯುತ್ತಿದೆ, ಇದು ಸರಿಯಲ್ಲವೆಂದು ನಾನು ಹೇಳಿದ್ದೇನೆ.

ಶ್ರೀ ಗಟ್ಟಿಚಂದ್ರಶೇಖರ್.—ರೇಪ್ ಮಾಡಿದರೂ ಎಂದು ಸುಳ್ಳು ಹೇಳಿದ್ದರಿಂದ ಅವರು ಬೇಜಾರುಪಟ್ಟುಕೊಂಡು ಅವರೇ ರೇಪ್ ಮಾಡುವುದಕ್ಕೆ ಶುರುಮಾಡಿದರು. ಕಲ್ಲು ಹೊಡೆದರು ಎಂದು ಸುಳ್ಳು ಹೇಳಿದ್ದರಿಂದ ಅವರು ಕಲ್ಲು ಹೊಡೆಯುವುದಕ್ಕೆ ಶುರುಮಾಡಿದರು. ಮಾನ್ಯ ಅಧ್ಯಕ್ಷರೇ, ನಮ್ಮ ಕೆಲವು ಸ್ನೇಹಿತರು ಇಲ್ಲಿ ಇದ್ದಾರೆ. ಅದರಲ್ಲಿ ನಮ್ಮ ಲಕ್ಷ್ಮೀಸಾಗರ್‌ರವರು ಇದ್ದಾರೆ. ಅವರನ್ನು ನೀವು ದಯಾಸಾಗರ್ ಎಂದರೆ ಅವರು ಇಲ್ಲವೆನ್ನುತ್ತಾರೆ, ಲಕ್ಷ್ಮೀಸಾಗರ್ ಎಂದರೆ ಲಕ್ಷ್ಮೀನೂ ಇಲ್ಲವೆನ್ನುತ್ತಾರೆ. ಅವರ ಹತ್ತಿರ ಇನ್ನೇನು ಇದೆಯೋ ಗೊತ್ತಿಲ್ಲ.

ಇನ್ನು ಈ ಮೊದಲು ಹಾವನೂರ್ ಕಮಿಷನ್ ನೇಮಕ ಮಾಡಿದಾಗ, ಅವರು ಇಲ್ಲದಿರುವ ಜಾತಿಗಳನ್ನೆಲ್ಲಾ ಹುಟ್ಟು ಹಾಕಿ ಒಂದು ವರದಿ ಕೊಟ್ಟರು. ನಂತರ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಆ ವರದಿಗೆ ಇದೇ ಸಭೆಯಲ್ಲಿ ಬೆಂಕಿ ಇಟ್ಟರು. ಆಗ ನಾನು ಆಡಳಿತ ಪಕ್ಷದ ಕಡೆ ಇದ್ದೆ. ಆದಕಾರಣ ನಾನು ಬಾಯಿ ಬಿಡುವಂತಿರಲಿಲ್ಲ. ನಮ್ಮ ಜಾತಿಗೆ ಅನ್ಯಾಯವಾಗಿದೆ ಎಂದು ನನಗೆ ಗೊತ್ತಿದ್ದರೂ ಸಹ ಮತ್ತು ಆ ಬಗ್ಗೆ ನನ್ನ ಎದೆಯೊಳಗೆ ಬೆಂಕಿಯಿದ್ದರೂ ಸಹ ಆಗ ನಾನಂ ಏನೂ ಮಾಡುವಂತಿರಲಿಲ್ಲ. ಆಗ ತುಮಕೂರಿನ ವೀರಶೈವರು ನನಗೆ ಒಂದು ಪತ್ರ ಬರೆದರು. ಈ ವರದಿಯಿಂದ ವೀರಶೈವ ಜನಾಂಗದ ಹಿತಕ್ಕೆ ದಕ್ಕೆಯಾಗುತ್ತಿದೆ. ಆದರೂ ಸಹ ನಾಯಿಗಳು ಬಿಸ್ಕತ್ ಹಾಕುವುದನ್ನೇ ಕಾಯುವಂತೆ ತಾವು ಶ್ರೀ ದೇವರಾಜ ಅರಸ್ ಅವರು ಹಾಕುವ ಬಿಸ್ಕತ್‌ಗಾಗಿ ಕಾದುಕೊಂಡಿದ್ದೀರಿ ಎಂದು ಬರೆದರು. ಆದರೆ ನನಗೆ ಶ್ರೀ ದೇವರಾಜ ಅರಸ್ ಅವರು ಬಿಸ್ಕತನ್ನೂ ಕೊಡಲಿಲ್ಲ ಬಾಳೆಹಣ್ಣನ್ನೂ ಕೊಡಲಿಲ್ಲ. ಈ ವರದಿಯಲ್ಲಿ ವೀರಶೈವ ಜನಾಂಗದವರನ್ನು ಫಾರ್‌ವರ್ಡ್ ಎಂದು ಸೇರಿಸಿರುವುದರಿಂದ ತಮ್ಮ ಮಕ್ಕಳಿಗೆ ಕಾಲೇಜುಗಳಲ್ಲಿ ಸೀಟ್‌ಗಳು ಸಿಗುತ್ತಿಲ್ಲ ಮತ್ತು ಸರ್ಕಾರದ ನೌಕರಿಗಳು ಸಿಗುತ್ತಿಲ್ಲವೆಂದು ಜನರು ನಮ್ಮನ್ನು ಶಪಿಸುತ್ತಿದ್ದಾರೆ. ನಮ್ಮ ರಾಜ್ಯ ಜಾತ್ಯಾತೀತವಾದಂಥ ರಾಜ್ಯ. ನಮ್ಮದು ಸಮಾಜವಾದಿ ರಾಜ್ಯ. ಇಂತಹ ನಮ್ಮ ಜಾತ್ಯಾತೀತ ರಾಜ್ಯದಲ್ಲಿ ಜಾತಿಯ ಆತೀತತೆ ಆಗಿದೆ. ಇಲ್ಲದ ಜಾತಿಗಳೆಲ್ಲಾ ಹೊರಗೆ ಬಂದಿವೆ. ನಮ್ಮ ಸಮಾಜವಾದಿ ಸಮಾಜದಲ್ಲಿ ವಾದವಿವಾದಗಳಾಗುತ್ತಿವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೮೦ ಲಕ್ಷದಷ್ಟು ವೀರಶೈವರಿದ್ದಾರೆ. ನಮ್ಮದು ಪುರಾತನ ಸಂಸ್ಕೃತಿ. ಇಂತಹ ಒಂದು ಸಮಾಜದಿಂದ ಬಂದಿರುವ ಶಾಸಕರು ನಾವು. ಮಹಾತ್ಮಾಗಾಂಧೀಜಿಯವರು ಹಾಗೂ ಶ್ರೀಮತಿ ಇಂದಿರಾಗಾಂಧಿಯವರು ನಮ್ಮದು ಜಾತ್ಯಾತೀತ ರಾಷ್ಟ್ರವಾಗಬೇಕಂ ಮತ್ತು ಸಮಾಜವಾದಿ ರಾಷ್ಟ್ರವಾಗಬೇಕೆಂದು ಏನು ಹೇಳಲು ಹೊರಟರೋ, ಈ ಒಂದು ಮಹತ್ ಕಾರ್ಯವನ್ನು ೧೨ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರು ಮಾಡಿದರು ವೀರಶೈವ ಸಮಾಜ ಒಂದು ಮತಕ್ಕೇ ಆಗಲೀ ಒಂದು ಜಾತಿಗಾಗಲೀ ಸೇರಿದ್ದಲ್ಲ, ಇದು ಮಾನವ ಧರ್ಮ, ವಿಶ್ವಧರ್ಮ ಎಂದು ಅವರು ಹೇಳಿದರು. ಸಮಾಜವಾದದ ತತ್ವದ ಆಧಾರದ ಮೇಲೆ ಇಂತಹ ಒಂದು ಸಮಾಜವನ್ನು ಸ್ಥಾಪನೆ ಮಾಡಿದರು. ಈ ಒಂದು ಪರಂಪರೆಯಿಂದ ಬಂದಂಥ ಈ ಸಮಾಜದಲ್ಲಿ ನಾನೂ ಸಹ ಒಬ್ಬನಾದ ಕಾರಣ. ಈಗ ಎಲ್ಲರೂ ಅವರವರ ಜಾತಿಯ ಬಗ್ಗೆ ಹೇಳುತ್ತಿರುವ ಕಾರಣದಿಂದ ನಾನೂ ಸಹ ಹೇಳಬೇಕಾಗಿದೆ. ನಮ್ಮದು ಜಾತ್ಯಾತೀತ ರಾಜ್ಯವಾದರೂ ಜಾತಿ ಬಗ್ಗೆ ಹೇಳುತ್ತಾರೆ. ಇದರ ಜೊತೆಗೆ ಜಾತಿಯ ಆಧಾರದ ಮೇಲೆಯೇ ಕೆಲಸ ಕೊಡಲಾಗುತ್ತಿದೆ. ಮತ್ತು ಮಂತ್ರಿಗಳನ್ನು ನೇಮಕ ಮಾಡಲಾಗುತ್ತಿದೆ. ಆದಕಾರಣ ನಮ್ಮದೂ ಒಂದು ಜಾತಿ ಎಂದು ಹೇಳಬೇಕಾಗಿದೆ. ನಮ್ಮ ವ್ಯವಹಾರದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ಆದರೆ ನಮ್ಮ ಮನೆತನದಲ್ಲಿ ಒಂದು ಜಾತಿ ಎಂಬುದು ಇದೆ. ಎಲ್ಲ ಜಾತಿಗಳು ಹೋಗಬೇಕೆಂದು ನಾನು ಬದುಕಿರುವುದಿಲ್ಲ, ಆದರೆ ಈಗ ನಮ್ಮ ಸಮಾಜದವರಿಗೆ ಆಗಿರುವ ಅನ್ಯಾಯದ ಬಗ್ಗೆ ಏನು ಶಪಿಸುತ್ತಿದ್ದಾರೆ. ಆದರ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಈಗ ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲ. ಆದರೂ ಅಧ್ಯಕ್ಷರ ಮುಖಾಂತರ ಅವರ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಹಾವನೂರ್ ವರದಿಪ್ರಕಾರ :

He has assessed the educational standards of each community on the basis of SSLC pass per 1000 in April 1972. The State average per thousand is 1.69. If the S.S.L.C pass of any caste is less than the State average, the caste is considered as socially and educationally backward and has been held as eligible for concession under Art. 15 (4) of the Constitution. The S.S.L.C. pass of Lingayats according

to him is 2.33 per 1000 and therefore is not included in the list of Backward Classes for reservation in Government Service under Art. 16 (4) of the Constitution ಎಂದು ಬರೆದಿದ್ದಾರೆ. ಆದರೆ ವಾಸ್ತವಾಂಶ ಇರುವುದು : On the basis of this projected Lingayat population of 8560000 in 1972 the educational standards of Lingayats would be 1.19 per 1000 population *i.e.*, 0.50 less than the State average and representation in Government service would be 10.21% as against its share of 28.52% and therefore is eligible, as per the standards adopted by Havanur himself, for educational concessions under Art. 15 (4) and reservation in Governmont Service under Art. 16(4) of the Constitution. Therefore, the Lingayats are to be included in the list of Backward Classes. ಇದನ್ನು ಮಾನ್ಯ ಮುಖ್ಯಮಂತ್ರಿಗಳು.....

ಶ್ರೀ ಎ. ಲಕ್ಷ್ಮಿಸಾಗರ್,—ನಮ್ಮ ಸಂವಿಧಾನದ ಪ್ರಕಾರ ಹಾಗೂ ಹಾವನೂರ್ ವರದಿ ಆಧಾರದ ಮೇಲೆ ನಮ್ಮ ಸರ್ಕಾರದವರು ಏನು ಒಂದು ಆಜ್ಞೆ ಹೊರಡಿಸಿದ್ದಾರೆ, ಆ ಆಜ್ಞೆಯು ನಮ್ಮ ಸಂವಿಧಾನದ ೧೫ ಮತ್ತು ೧೬ನೇ ಆರ್ಟಿಕಲ್‌ಗಳಿಗೆ ವಿರುದ್ಧವಾಗಿದೆ ಎಂದು ಸುಪ್ರೀಂ ಕೋರ್ಟಿನಲ್ಲಿ ಈಗಾಗಲೇ ಒಂದು ಅರ್ಜಿ ಇದೆ. ಅದು ತೀರ್ಮಾನವಾಗಲಿ.

ಶ್ರೀ ಗಟ್ಟಿಚಂದ್ರಶೇಖರ್.—ರಾಜ್ಯಾಂಗದ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಸಮಾಜದವರಿಗೆ ಅನ್ಯಾಯವಾಗಿದೆ ಎಂದು ಇದನ್ನು ಯಾರೋ ಬರೆದುಕೊಟ್ಟಿದ್ದರಿಂದ ಅದನ್ನು ಇಲ್ಲಿ ಓದಿದೆ. ಇನ್ನೊಬ್ಬರಿಗೆ ಸಿಗುವುದನ್ನು ಕಿತ್ತುಕೊಳ್ಳಬೇಕು ಎಂಬುದು ನಮ್ಮ ಉದ್ದೇಶವಲ್ಲ. ಆದರೆ ನಮ್ಮ ಮನೆಯನ್ನು ನಾವು ಮೊದಲು ಚೆನ್ನಾಗಿ ಇಟ್ಟುಕೊಳ್ಳಬೇಕಾಗಿದೆ ಬಸವಣ್ಣನವರ ತತ್ವ ನಮ್ಮದು. ನಮ್ಮ ಸಮಾಜದವರಿಗೆ ಈ ವರದಿಯಿಂದ ಅನ್ಯಾಯವಾಗಿದೆ ಎಂದು ಈ ನಮ್ಮ ಸಮಾಜದ ಶಾಸಕರ ಮೇಲೆ ಏನು ಆರೋಪ ಹೊರಿಸಿದ್ದಾರೆ, ಇದಕ್ಕೆ ನಾವು ಬದ್ಧರಾಗಿದ್ದೇವೆ. ಹಾವನೂರ್ ವರದಿಯಲ್ಲಿ ನಮ್ಮ ಸಮಾಜಕ್ಕೆ ಏನು ಒಂದು ರೀತಿಯ ಬೇಡಿ ಹಾಕಿದ್ದಾರೆ, ಆದರಿಂದ ಜಿಡುಗಡೆ ಮಾಡಿ ನಮಗೆ ಸಲ್ಲಬೇಕಾದ ನ್ಯಾಯವನ್ನು ದೊರಕಿಸಿ ಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ವೀರಶೈವ ಜನಾಂಗದವರನ್ನು ಹಿಂದುಳಿದ ವರ್ಗದವರ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ವಂಸವಿಗಳು ಬಂದಿವೆ ಎಂದು ತಾವು ಹೇಳಿದ್ದೀರಿ. ಈ ರೀತಿ ಜಾತಿ ಆಧಾರದ ಮೇಲೆ ಸೇರಿಸುವುದಕ್ಕೆ ಬದಲು ಆರ್ಥಿಕ ಆಧಾರದ ಮೇಲೆ ಸೇರಿಸುವುದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಗಟ್ಟಿಚಂದ್ರಶೇಖರ್.—ನಾನು ಮೊದಲಿನಿಂದಲೂ ಆರ್ಥಿಕ ದೃಷ್ಟಿಯಿಂದಲೇ ಇದನ್ನು ಇತ್ಯರ್ಥ ಮಾಡಬೇಕೆಂದು ಹೇಳುತ್ತಿರುವುದು. ಆದರೆ ಈಗ ಜಾತಿ ಆಧಾರದ ಮೇಲೆ ಸೇರಿಸುತ್ತಿರುವುದರಿಂದ, ನಮ್ಮನ್ನು ಸಹ ಆದೇರೀತಿ ಸೇರಿಸಿ ಎಂದು ಕೇಳುತ್ತಿದ್ದೇವೆ. ಇದರಿಂದ ನಾನೇನೂ ಸರ್ಕಾರದ ಕೆಲಸಕ್ಕೆ ಸೇರುವುದಕ್ಕಾಗುವುದಿಲ್ಲ. ಏಕೆಂದರೆ ನನಗೆ ವಯಸ್ಸಾಗಿದೆ. ನನ್ನ ಮಗನೂ ಸಹ ಸೇರುವುದಿಲ್ಲ ಆದರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಶಪಿಸಬಾರದೆಂದು ಕೊಂಡು ಈ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಸ್ಟೈಕ್ ಬಗ್ಗೆ ಹೇಳಬೇಕಾಗಿದೆ. ಈ ಸ್ಟೈಕ್‌ಗಳ ಕಾರಣದಿಂದ ನಾವು ದಾರಿಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಏಕೆಂದರೆ ಇದ್ದಕ್ಕಿದ್ದಂತೆ ಕಲ್ಲು ತೆಗೆದುಕೊಂಡು ಹೊಡೆಯುತ್ತಾರೆ. ಆದ ಕಾರಣ...

ಶ್ರೀ ಪಿ ರಾಮದೇವ್.—ಬೆಂಗಳೂರು ನಾಗರೀಕರ ಮೇಲೆ ತಾವು ಆ ರೀತಿ ಆಪಾದನೆ ಮಾಡಬೇಡಿ. ಇಲ್ಲಿನ ಜನರು ಶಾಂತಿಪ್ರಿಯ ಜನರು. ಯಾರೂ ಕಲ್ಲು ಹೊಡೆಯುವುದಿಲ್ಲ. ಮತ್ತು ಯಾವೊತ್ತೂ ಆ ರೀತಿ ಮಾಡುವುದಿಲ್ಲ.

ಶ್ರೀ ಗಟ್ಟಿಚಂದ್ರಶೇಖರ್.—ನಾನೇನೋ ಧೈರ್ಯವಾಗಿ ಓಡಾಡುತ್ತೇನೆ. ಆದರೆ ಯಾವ ಸಮಯದಲ್ಲಿ ಏನು ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಕಳೆದ ಅಸೆಂಬ್ಲಿಯಲ್ಲಿ ತಾವು ಇಲ್ಲಿ ಸದಸ್ಯರಾಗಿರಲಿಲ್ಲ. ಆಗ ಶ್ರೀ ಎಸ್. ವೈ. ಪಾಟೀಲರು ಸದಸ್ಯರಾಗಿದ್ದರು. ಆಗ ವಿದ್ಯಾರ್ಥಿಗಳ ಚಳುವಳಿ

ನಡೆದಿತ್ತು. ನಾನು ಜನರಲ್ ಹಾಸ್ಪೆಲ್ ಕಡೆ ಹೋಗುತ್ತಿದ್ದೆ. ಅದೇ ಸಮಯದಲ್ಲಿ ಶ್ರೀ ಪಾಟೀಲರು ಜನರಲ್ ಹಾಸ್ಪೆಲ್‌ನಿಂದ ಹೊರಗಡೆ ಬಂದಿದ್ದರು. ಆಗ ಹುಡುಗರು ಅವರನ್ನು ಹಿಡಿದುಕೊಂಡರು. ಆಗ ಅವರು ಉತ್ತರ ಕರ್ನಾಟಕದ ಭಾಷೆಯಲ್ಲಿ ನಿಮಗೆ ಬುದ್ಧಿ ಇದೆಯೋ ಅಥವಾ ಇಲ್ಲವೋ ಎಂದು ಬೈದರು. ಆ ಹುಡುಗರು ನನ್ನನ್ನು ಸಹ ಹಿಡಿದುಕೊಳ್ಳಬಹುದೆಂದುಕೊಂಡು ಉಪಾಯವಾಗಿ ಜನರಲ್ ಹಾಸ್ಪೆಲ್‌ನೊಳಕ್ಕೆ ಓಡಿಹೋದೆ. ಒಟ್ಟಿನಲ್ಲಿ ಬೆಂಗಳೂರಿನಲ್ಲಿ ಎಲ್ಲ ತರಹದ ಜನರು ಬಂದು ಸೇರಿಕೊಂಡಿದ್ದಾರೆ. ಇದರಿಂದ ಯಾವಾಗ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ನೋಡಿದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೋ ಅಥವಾ ಇಲ್ಲವೋ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಯಾವ ಪಕ್ಷದ ಮುಖಂಡರೇ ಆಗಲೀ, ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕು ಮತ್ತು ಅದಕ್ಕೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-00 P.M.

SRI B. B. SAYANAK.—Mr. Deputy Speaker sir, Sri Kushnoor has moved a motion of thanks to the Governor's Address. I oppose this motion and give my suggestions.

Sir, in the Governor's Address, there is no mention at all about the Maharashtra-Karnataka border dispute. Sri Gundu Rao is saying that he would go to the Supreme Court for Kasargod issue and see that it is merged in Karnataka. Sri Gundu Rao has said that there is no issue of Belgaum.

SMT. S. PRAMILA.—Belgaum issue is dead issue.

SRI B. B. SAYANAK.—You may say. So Anyway, I welcome the decision of Sri Gundu Rao going to the Supreme Court for Kasargop issue. Sir, the Mahajan Commission report was placed before the Lok Sabha on 8th December 1970, but the Central Government has not discussed this Mahajan Commis ion Report so far. The Centre has not taken any decision. Therefore, I remember my friends that this issue is pending before the Centre. The issue is not settled and is not over Unless and until there is a decision on the Mahajan Cammission report, the issue is presumed to be alive. We are harping and fighting for the last 25 years. We have won all the general elections to the Legislative Assembly, five times consecutively. In Kasargod you won the election ia 1967, but not in the year 1972 or afterwards and still you are harping that we want Kasargod. Therefore, have some principle. We are requesting the Central Government to adopt some principle. The Governor has stated in his address to the Legislature that 'Violent agitations has no place in a democracy. If violent agitations has no place in democracy. people want to come on the road without any grievances, without any reason? For the last 25

years we have won the elections right from village Panchayats Taluks Boards, Municipalities to the general election to the Legislative Assembly. In a democracy, if there is any sanctity to the election, take the basis of this election as a criterion to solve this issue. Sri Mahajan accepted the election results in of Kasargod. He said that the kannada people have won the election, and therefore the Kasargod should be merged in Karnataka. In Bidar, Marathi people lost election, and therefore, he said, the Bidar should be given to Karnataka. But, what about Belgaum, Uchagaon, Khanapur Nipani and Karwar. Right from the year 1967 in which the Mahajan Commission was appointed, the Maharashtra Ekikaran Samiti has succeeded in winning all the elections. But, Sri Mahajan in his report says, 'the election had not fought on the issue of Maharashtra Karnataka' The Mahajan Commission's report is baseless without adopting any principle. Sir, at Belgaum, Yamanapur is a hamlet of of Kangrali (Bk). This hamlet is given to Karnataka because the Aluminium factory is situated in Yamanapur hamlet and strangely enough, Kangrali (Bk) is given to Maharashtra. This is a great injustice to Kangrali (Bk) village. Sri A. R Antulay the Chief Minister of Maharashtra has written a book 'Mahajan report un covered and I tnink yau might have read it. He has crashed the report of Mahajan Commission and my learned friends are saying that this Maharashtra-Karnataka border dispute isssueis over. Sri Zail Singh Home Minister of India said in Bombay that he discussed this issue with the Chief Minister of Maharashtra and shortly he would discuss this issue with the Chief Minister of Karnataka. He also said that subsequently he would discuss this issue with the Chief Ministers of both Maharashtra and Karnataka. Sir, when we met sometime back to Smt. Indra Gandhi, she also told us that she would solve this issue after the general elections to the 9 State Assemblies. I request through you Sir, to this House and the Prime Minister of India to solve this issue once for all, if they want to remain true to their words promises and assurances and take the blessings of the border people. I have no grudge whatsoever, if Sholapur belongs to you it and it is given to you. If Kolhapur belongs to you, it will be given to you, but accept some principle. Accept the election issue as a criterion. According to me Maharashtra-Karnataka border issue village as the unit should be solved on the basis of Geographical contiguity simple majority and wishes of the people, accept this principle and solve this border dispute once for all.

Sir, the farmers agitation is going on and it is a farmers agitation It is an agitation to get the better prices for their produce. They are demanding support price. Why they are asking for support price ? What is the plight of these agriculturists ?

The prices given for the agricultural products are worse. What are the prices given? Even a Peon in a nationalised or scheduled bank draws nearly Rs. 600 to 800 per month. But the poor agriculturist is hardly getting Rs. 100 per month. If you take into consideration his income and expenditure, his profit will be nil All the members in the family of the agriculturists are working hard in the field. But we are not considering their wages. What for the agriculturists are asking They are asking for better prices. In case of industrialists, they have got their strong unions to voice their grievances and through their Unions they will get whatever they demand. But there is no union for the agriculturists Now it is a good thing that they have united and they have started agitation. A day will come when all the Governments will surrender and then only the agriculturists will get good prices. My friends have spoken about big agriculturists. But what about the small and marginal farmers? I think Sri R. Gundu Rao has done something good for the small and marginal farmers. He has annonnced some concessions to the small and marginal farmers.

Sir, there is census operation. That is a national work. In our area, we are demanding that Marati and Kannada Enumerators should go to each house simultaneously and conduct the census work. In the year 1951 when Sri Balvantha Rao Datar was who was afterwards the Union Home Minister, he had demanded that Marati and Kannada enumerators should go to each house simultaneously and the Central Government or the Commission of Census has accepted in the year 1. Again in the year 1971 they have done this census work. year, they have appointed only Kannada Enumerators not Marati Enumerators. I am therefore insisiting the Government and the Central Government through you that as s this census work is concerned, both Kannada and Marati Census nerators should go simultaneously. Otherwise the Maharashtra arana Samithi has decided to boycot the census operation.

DEPUTY SPEAKER.—You have only two minutes. Please conlude speech.

SRI B. B. SAYANAK.—Sir, I have to take half an hour. It is not sible for me to conclude my speech within two minutes.

Sir, there is Bombay Protection of Devadasi Act 1934. The eduled Caste and lower castes girls who are young are dedicated Parashurama s/o Ellamadevi and these girls after attaining the age maturity, are leading the life of prostitutes in Bombay, Poona, apur and Kolapur. The census has been worked out and it is nd that 60% of the prostitutes are from Karnataka and they are

Devadasis'. I request the Government to implement the Bombay Protection of Devadasi Act 1934, which is in vogue and the Government must stop this 'Devadasi' system immediately. Sir, there are corporations in Karnataka in Hubli, Belgaum, Dharwar, Mysore Bangalore. Every time my friend the Hon'ble Minister Sri Dharam Singh is assuring that the Government are going to take up the elections in these corporations. But the elections are not held so far and every time the Government are putting forth some reason or the other I therefore, request the Government to hold elections to these Corporations immediately. We the public should not expect that an Administrator or some other person will run the Corporations.

Sir, in the Governor's speech, it is reported that there is clean and good administration. I want to ask the Government–Where is the clean administration? I have given some of the applications to the Chief Minister about six months back and no response has come from the Government. Is this a clean administration? When one man is holding six charges, how can we expect him to do justice t the people. Sir, in Belgaum the Deputy Commissioner is my goc friend and he is holding six charges. He was the in-charge Division: Commissioner for two months, he was also the Administrator of tl Corporation, Chairman of the city Improvement Board, Chairma of the Town Planning Authority and he was holding several oth charges also. If this is the position, how can there be a claen good administration.

How the officer can see the papers? Is he going to only sig papers? Why the people have been complaining? Why corru is rampant everywhere today? It is because the files are not cl in time. The Government have launched 'File Clearance D But in reality the files are not cleared promptly. You go to P.W department, Revenue department or any other department officials are not doing their duties if the people concerned do no the money. This is the position existing today. When I heard complaint, I told the people to give a slap to the officer or of concerned and then come to me. Then only this corruption wi stopped. The Government have Anti Corruption Branch and als Vigilance squad to stop this corruption. But these agencies not doing anything. If anybody gives clue of a person being cor this Vigilance squad people will give clue to the concerned ma nobody will be held. What is the use of having the Vigilance s or the Anti Corruption Branch? The Government should immedi take action to abolish this corruption which is rampant everyw

Sir, the Government have stated that they intend construction the school buildings in all the villages by the end of November 198

Sir, what about the school buildings in Belgaum and Nippani Corporations ? We have been requesting the Hon'ble Minister Sr Dharamsingh to construct the buildings for these schools. In Shaha pur, there is a school No. 13 which was the biggest building. Bu the same building was dis-mantled and collapsed. It has not been r constructed so far, inspite of my repeated requests to the Hon'b Ministers Sri Dharam Singh and Sri Shankara Rao. But nothir has been done. I have visited Nippani No school buildings a there in the Municipal area. How are you going to do justic You are constructing schools for Kannada. I have no o jec But at the same time, you must construct schools for the m boys. I think, for urdu boys also you are constructing schools. But I am repeatedly telling you that you must Marathi school building in Belgaum Corporation area and in municipal area. Something is about appointing the teacher teachers are not there, what is the use of constructing schoo constituted the District Level Recruitment Committees. On after they conducted interviews for the posts of teachers, ately you have passed orders stating that all the Committ been suspended and cancelled. What is this? For the last there are no teachers. How education is going to be a goo or the boys will get a good education?

Regarding Kannada compulsory education in our ar told the Chief Minister that so long as border dispute is th tain status quo. Our boys are suffering. Those who are i they have to pass the Kannada Language Examination. their increments and promotions have been stopped. fair on the part of the Government. So,...

SRI MALLUR ANAND RAO.—Till they are in Karnataka, to learn Kannada. If they want, they can go to Maharasl

SRI B. B. SAYANAK.—I am saying that so long as t dispute is there, status quo should be maintained.

SRI A. B. JAKANUR.—There is no border dispute.

SRI B. B. SAYANAK.—Status quo should be maintained.

SRI MALLUR ANAND RAO.—There is no border dispute.

SRI B. B. SAYANAK.— From 8th standard onwards, t made Kannada compulsory. Mr. Devaraj Urs's Government that they would cancel that order. This Government also has a But nothing has been done. So, I request this Government make Kannada compulsory. There is a three language mother tongue, english and then hindi. We are prepared t

this *i.e.*, marathi as mother tongue, english and hindi as national language. Therefore, I request the Government to keep Kannada as optional. I have no objection. You do not want hindi to be imposed. Why are you going to impose Kannada? Hindi is a national language. If anybody is willing to learn Kannada, I have no objection. People will learn but do not make it compulsory.

I congratulate the Chief Minister for his decision to abolish some f the Boards and Corporations. It is a good thing. But according me, the present Government is also going to constitute some of the orations. If this Government is going to constitute some of the rations, it will be doing injustice. The Government must adhere lecision taken. The Government should not constitute any tion or Board.

garding construction of Janata Houses, the Government is hat they have constructed so many Janata houses. I wel-. But, the Government has not mentioned the number of the houses that have collapsed. In Belgaum taluka and in Khana-luka, more than 200 Janata houses have collapsed. In Belgaum 100 beneficiaries have not gone to the houses because they other houses. So, I request the Government that whenever rnment constructs the Janatha Houses, they must see that uses go to the persons who are in need of them.

in Khanapur and Belgaum Talukas, there is no sugar factory. ugarcane grown there is going to Malaprabha and the Mala-Sugar Industry is going to crush our sugarcane. So, our e is withering away and the growers are suffering. So, I he Government and the Chief Minister Sri Gundu Rao to give ation for Khanapur Sugar Factory so that they will get the the sugarcane and sugar factory. They have collected hs and they are going to collect Rs. 5 lakhs more. So, I he Government to give registration or licence to Khanapur ctory. With these words, I thank the Deputy Speaker.

ಕೆ. ರಾಮಭಟ್ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಖ್ಯವಾದ ಅಂಶಗಳನ್ನು ಹೇಳಿದ್ದಾರೆ. ಆದರಲ್ಲಿ ಪ್ರಾಮುಖ್ಯವಾಗಿರತಕ್ಕಂಥಾದ್ದು ' ನನ್ನ ಸರ್ಕಾರವು, ಸ್ವಚ್ಛ ಹಾಗೂ ದಕ್ಷ ಆಡಳಿತವನ್ನು ಒದಗಿಸುವ ಕಾರ್ಯಕ್ಕೆ ಆದ್ಯತೆ ಟೆ " ಎಂದು ಹೇಳಿದ್ದಾರೆ. ಈ ಮಾತನ್ನು ರಾಜ್ಯಪಾಲರು ಸ್ವತ: ಹೇಳಿಲ್ಲ, ಮಂತ್ರಿ ದವರು ಈ ಮಾತುಗಳನ್ನು ಹೇಳಿದ್ದಾರೆ. ದಕ್ಷತೆ ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಇದೆ, ಟ್ಟಿಗೆ ಕೆಲಸ ಮಾಡುತ್ತಿದೆ ಎಂದು ಹೇಳುವುದಕ್ಕೆ ತಮಗೆ ಒಂದೆರಡು ನಿದರ್ಶನವನ್ನು ಕೊಡು ಷ್ಟಪಡುತ್ತೇನೆ. ಇತ್ತೀಚೆಗೆ ಒಬ್ಬರು ಸರ್ಕಾರಿ ಪೋಲೀಸ್ ಅಧಿಕಾರಿಗಳು ಮೃತಪಟ್ಟರು. ತ್ತು ೨ ವರ್ಷಗಳಾಗುತ್ತಾ ಬಂದಿದ್ದರೂ ಸಹ ಅವರ ಫ್ಯಾಮಿಲಿಗೆ ಫ್ಯಾಮಿಲಿ ಪೆನ್‌ಷನ್ ರಿಗೆ ಕೊಟ್ಟಿಲ್ಲ. ಅವರ ಫ್ಯಾಮಿಲಿ ಪೆನ್‌ಷನ್ ಪೇಪರ್ ಎಲ್ಲಾ ರೆಡಿಯಾಗಿ ೬ ತಿಂಗಳಾದರೂ

ಸಹ ಇಲ್ಲಿಯವರೆಗೆ ಅವರ ಕುಟುಂಬದವರಿಗೆ ಫ್ಯಾಮಿಲಿ ಪೆನ್‌ಷನ್ ಸಿಕ್ಕಿಲ್ಲ. ಇದು ಇವರ ಸರ್ಕಾರದ ದಕ್ಷತೆಯನ್ನು ತೋರಿಸುತ್ತದೆ. ದಕ್ಷತೆ ಎಲ್ಲಿದೆ ಎನ್ನುವುದನ್ನು ನಾವು ನೋಡಬೇಕಾದರೆ ದುರ್ಬಿನು ಹಿಡಿದು ನೋಡಬೇಕಾಗುತ್ತದೆ. ನಮ್ಮ ಕ್ಷೇತ್ರದ ಉಪ್ಪಿನ ಅಂಗಡಿಯಲ್ಲಿ ಒಂದು ಆಸ್ಪತ್ರೆ ಇದೆ, ಅಲ್ಲಿ ಎರಡು ವರ್ಷಗಳಿಂದ ಡಾಕ್ಟರ್ ಇಲ್ಲ. ಪದೇ ಪದೇ ನಾನು ಈ ವಿಷಯದ ಬಗ್ಗೆ ವಿಧಾನ ಸೌಧದಲ್ಲಿ ಪ್ರಸ್ತಾಪ ಮಾಡಿ ಹೇಳುತ್ತಲೇ ಬಂದಿದ್ದೇನೆ, ಮಂತ್ರಿಗಳವರ ಗಮನಕ್ಕೆ ಪತ್ರ ಬರೆದು ಸಹ ತಿಳಿಸಿದ್ದೇನೆ, ಪತ್ರಿಕೆಗಳಲ್ಲೂ ಸಹ ಪ್ರಕಟವಾಗಿದೆ. ಎರಡು ವರ್ಷಗಳಿಂದ ಒಂದು ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲವೆಂದರೆ ಯಾವ ರೀತಿಯ ದಕ್ಷ ಮತ್ತು ಸ್ವಚ್ಛ ಆಡಳಿತ ನಡೆಯುತ್ತಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ.

೫–೩೦ ಪಿ. ಎಂ.

ಇವತ್ತಿನ ದಿವಸ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಇರತಕ್ಕಂತಹ ಉಪಾಧ್ಯಾಯರ ಕೊರತೆ ಎಷ್ಟು ದೊಡ್ಡ ಸಮಸ್ಯೆಯಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿರಬಹುದು. ಆದಕಾರಣ ಯಾವ ರೀತಿಯಲ್ಲಿ ದಕ್ಷ ಆಡಳಿತವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಇವರು ಹೇಳಿ ತೋರಿಸಿದ್ದರೆ ಸಂತೋಷ ಪಡುತ್ತಿದ್ದೆ. ಆದರೆ ಎಲ್ಲಿಯೂ ದಕ್ಷತೆಯ ಸುಳಿವು ಸಿಕ್ಕುತ್ತಿಲ್ಲ. ಅಂದಾಗ ಬರೀ ಬಾಯಿ ಮಾತಿನಿಂದ ದಕ್ಷತೆಯನ್ನು ಸಾಧಿಸುತ್ತೇವೆಂದರೆ ಸಾಲದು, ಆದನ್ನು ಕಾರ್ಯರೂಪಕ್ಕೆ ತಂದರೆ ನಮ್ಮ ಅಭಿನಂದನೆಗೆ ಸರ್ಕಾರ ಪಾತ್ರವಾಗುತ್ತದೆ. ಇನ್ನು ಸ್ವಚ್ಛ ಸರ್ಕಾರ ಮತ್ತು ಸ್ವಚ್ಛ ಆಡಳಿತದ ಬಗ್ಗೆ ಹೇಳುವುದಾದರೆ, ಸ್ವಚ್ಛ ಆಡಳಿತ ಕೊಡಬೇಕಾದರೆ ಮೊದಲು ಆಡಳಿತ ನಡೆಸುವವರು ಸ್ವಚ್ಛವಾಗಿರಬೇಕು. ಇವತ್ತಿನ ದಿವಸ ಅನೇಕ ಮಂತ್ರಿಗಳ ಮೇಲೆ ಬಹಳ ಗಂಭೀರವಾದ ಆರೋಪಗಳಿವೆ ಎಂಬ ಮಾತನ್ನು ನಾನು ಬಹಳ ದುಃಖದಿಂದ ತಮ್ಮ ಮುಂದೆ ಹೇಳುತ್ತಿದ್ದೇನೆ ಆರೋಪ ಇರತಕ್ಕ ಒಬ್ಬ ರಾಜ್ಯಮಂತ್ರಿಯನ್ನು ಕ್ಯಾಬಿನೆಟ್ ದರ್ಜೆಯ ಸಚಿವರನ್ನಾಗಿ ಮಾಡಿದ್ದಾರೆ. ಗಂಭೀರವಾದ ಆರೋಪ ಇರುವವರನ್ನು ಮಂತ್ರಿಗಳನ್ನಾಗಿ ಮಾಡಿದರೆ ಸರ್ಕಾರಿ ನೌಕರರು ಹಾಗೂ ಸಾಮಾನ್ಯ ಪ್ರಜೆಗಳು ಯಾವ ರೀತಿಯಲ್ಲಿ ಇದನ್ನು ತೆಗೆದುಕೊಂಡಾರು ಎಂಬುದನ್ನು ವಿಚಾರ ಮಾಡಬೇಕು. ಮೊದಲು, ಹೇಳಿದವರು ಆಚರಣೆಯಲ್ಲಿ ತಂದು ತೋರಿಸಬೇಕು. ಬರೀ ಕಾಯಿದೆ ಕಟ್ಟಲೆಗಳನ್ನು ಮಾಡಿದರೆ ಸಾಲದು, ಅವುಗಳನ್ನು ಪರಿಪಾಲನೆ ಮಾಡಿದಾಗ ಮಾತ್ರ ಈ ದೇಶದಲ್ಲಿ ಒಳ್ಳೆಯ ಆಡಳಿತ ಕೊಡಲಿಕ್ಕೆ ಸಾಧ್ಯ. ಆದುದರಿಂದ, ಆರೋಪ ಇರತಕ್ಕ ಮಂತ್ರಿಗಳನ್ನು ತಕ್ಷಣ ವಜಾ ಮಾಡಿದರೆ ಮಾತ್ರ ನಮ್ಮ ರಾಜ್ಯದಲ್ಲಿ ಸ್ವಚ್ಛ ಆಡಳಿತ ಬರುವುದಕ್ಕೆ ಸಾಧ್ಯ, ಇಲ್ಲದಿದ್ದರೆ ಸಾಧ್ಯವಿಲ್ಲ. ಆದ ಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ, ಇನ್ನು ಮುಂದಾದರೂ ಸ್ವಚ್ಛ ಆಡಳಿತ ಕೊಡುವ ಇಚ್ಛೆ ಇದ್ದರೆ ಯಾರ ಯಾರ ಮೇಲೆ ಆರೋಪ ಇದೆ ಅಂಥವರನ್ನು ಈ ರಾಜ್ಯದ ಆಡಳಿತ ದೃಷ್ಟಿಯಿಂದ ತಕ್ಷಣ ಮಂತ್ರಿಮಂಡಲದಿಂದ ವಜಾ ಮಾಡಬೇಕೆಂಬ ಸಲಹೆಯನ್ನು ತಮ್ಮ ಮುಂದೆ ಇಡುತ್ತೇನೆ.

ಇನ್ನು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ತಾಲ್ಲೂಕು ಮಟ್ಟದ ೨೦ ಅಂಶಗಳ ಕಾರ್ಯಕ್ರಮದ ಸಮಿತಿಯಲ್ಲಿ ನಾನು ಅಧ್ಯಕ್ಷನಾಗಿದ್ದೇನೆ. ದಿವಸದಿಂದ ದಿವಸಕ್ಕೆ ಈ ೨೦ ಅಂಶಗಳ ಕಾರ್ಯಕ್ರಮದ ಒಂದೇ ಒಂದು ಅಂಶದಲ್ಲಿ ಕೂಡ ಪ್ರಗತಿಯನ್ನು ಕಾಣುತ್ತಿಲ್ಲ. ಪೋಲೀಸ್ ಹತೋಟಿಯಲ್ಲಾಗಲೀ ಅಥವಾ ವಸ್ತುಗಳ ವಿತರಣೆಯಲ್ಲಾಗಲೀ ೨೦ ಅಂಶಗಳ ಕಾರ್ಯಕ್ರಮದ ಹೆಸರಿನಲ್ಲಿ ಮಾಡುವಂತಹ ಕಾರ್ಯಕ್ರಮ ಯಶಸ್ವಿಯಾಗಿ ಆಗುತ್ತಿಲ್ಲವೆಂದು ಹೇಳುತ್ತೇನೆ. ಕೇವಲ ಹೊಗಳಿಕೆಗೋಸ್ಕರ ಬೇಕಾದರೆ ಅದರ ಬಗ್ಗೆ ಹೇಳಿಕೊಳ್ಳಬಹುದು. ಪುರಸಭೆ ಮತ್ತು ನಗರಸಭೆಗಳ ಬಗ್ಗೆ ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚಿಸುತ್ತೇವೆಂದು ಹೇಳುತ್ತಿದ್ದಾರೆ. ಯಾವಾಗ ರಚಿಸುತ್ತಾರೋ ಗೊತ್ತಿಲ್ಲ. ಆದರೆ ಚುನಾವಣೆಗಳನ್ನೇ ನಡೆಸದೆ ನ್ಯಾಯ ಸಮಿತಿಗಳನ್ನು ರಚಿಸುತ್ತೇವೆಂದು ಹೇಳುವುದು ಸಮಂಜಸವಲ್ಲ. ಬೆಂಗಳೂರು ಹುಬ್ಬಳ್ಳಿ, ಧಾರವಾಡ, ಪುತ್ತೂರು, ಮಂಗಳೂರು ಕಾರ್ಪೋರೇಷನ್‌ಗಳಿಗೆ ಇದುವರೆಗೆ ಚುನಾವಣೆಯೇ ಆಗಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೂಡ ಎಲ್ಲಿಯೂ ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಾದರೂ ಸರ್ಕಾರ ಚುನಾವಣೆಗಳನ್ನು ನಡೆಸುತ್ತೇವೆಂದು ಆಶ್ವಾಸನೆ ಕೊಡಬೇಕು. ಯಾವಾಗ ಚುನಾವಣೆಯನ್ನು ನಡೆಸುತ್ತೇವೆಂಬ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯೇ ಹೇಳಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ಸರ್ಕಾರ ಚುನಾವಣೆಯನ್ನು ಯಾವಾಗ ಮಾಡುತ್ತದೆಂಬುದನ್ನು ಹೇಳಬೇಕಾಗಿತ್ತು.

ಇನ್ನು ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ಒಂದು ಸಣ್ಣ ಪ್ರಸ್ತಾಪ ಮಾಡಿದ್ದಾರೆ ಈ ಕಾರ್ಖಾನೆಗೆ ಕೇಂದ್ರ ಸರ್ಕಾರದಿಂದ ೩೦ ಕೋಟಿ ರೂಪಾಯಿ ಮಂಜೂರಾಗಿದೆ ಎಂಬ ವಿಷಯ ಈ ಸದನದಲ್ಲಿ ಚರ್ಚೆಗೆ ಬಂದಾಗ ಆ ಬಗ್ಗೆ ನಾನೂ ಕೂಡ ಈ ಸದನದಲ್ಲಿ ಮಾತನಾಡಿದ್ದೆ. ಆವತ್ತಿನ ದಿವಸ, ಇವತ್ತು ಮಂತ್ರಿಗಳಾಗಿರುವ ಶ್ರೀಮಾನ್ ವೆಂಕಟರಮಣರವರು ಅಧ್ಯಕ್ಷರಾಗಿದ್ದರು. ಇವತ್ತು ಆ ೩೦ ಕೋಟಿ ರೂಪಾಯಿ ಹಣದಲ್ಲಿ ೩೦ಲಕ್ಷ ರೂಪಾಯಿಗಳಾದರೂ ಇದೆಯೋ ಎಂಬುದನ್ನು ನೋಡಬೇಕು. ಇದು ಎಂತಹ ನಾಚಿಕೆಗೇಡಿನ ಸಂಗತಿ, ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎಲ್ಲದಕ್ಕೂ ಸಾಧ್ಯತೆ ಇದೆ ಎಂಬ ಮಾತನ್ನು ಹೇಳಿದ್ದಾರೆ. ಅವರು ತಮ್ಮ ಭಾಷಣದ ೧೨ನೇ ಪುಟದಲ್ಲಿ 'ಭಾರತ ಸರ್ಕಾರವು ವಿಜಯನಗರ ಉಕ್ಕಿನ ಯೋಜನೆಗೆ ಅಂತಿಮ ಒಪ್ಪಿಗೆ ನೀಡುವುದನ್ನು ನಿರೀಕ್ಷಿಸುತ್ತಿದ್ದೇವೆಂದು ಹೇಳಿದ್ದಾರೆ. ಯಾವಾಗ ಒಪ್ಪಿಗೆ ನೀಡುವುದು? ಈಗಾಗಲೇ ೩೦ ಕೋಟಿ ರೂಪಾಯಿ ಈ ಒಂದು ಯೋಜನೆಗಾಗಿ ಮಂಜೂರಾಗಿದೆ ಎಂದು ನಮ್ಮಿಂದ ಶಹಭಾಸ್‌ಗಿರಿ ಪಡೆದು, ಇನ್ನೂ ಒಪ್ಪಿಗೆಯನ್ನು ನಿರೀಕ್ಷಿಸುತ್ತಿದ್ದೇವೆಂದು ಹೇಳುವುದು ಯಾವ ರೀತಿ ಶೋಭೆ ತರುತ್ತದೆಂದು ಕೇಳುತ್ತೇನೆ? ಇದು ತುಂಬ ಅಪಮಾನ ಕರವಾದ ಸಂಗತಿ ಎಂಬ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಯಾವತ್ತೂ ಈ ರೀತಿ ಮಾಡಬಾರದಾಗಿತ್ತು. ಮತ್ತು ಇಂಥ ಮಾತನ್ನು ಹೇಳದೆ ಇದ್ದರೆ ಚನ್ನಾಗಿರುತ್ತಿತ್ತು ಎಂದು ಸಹ ಹೇಳುತ್ತೇನೆ. ಪರ್ ಕ್ಯಾಪಿಟಾ ಇನ್‌ಕಂನಲ್ಲಿ ನಮ್ಮ ರಾಜ್ಯ ೧೮ನೇ ಸ್ಥಾನದಲ್ಲಿದೆ. ಆದರೂ ಕೂಡ ನಾವು ಆಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ, ಇಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆಂದು ಬುಜ ತಟ್ಟಿಕೊಳ್ಳುತ್ತೀರಿ. ಎಲ್ಲ ರಾಜ್ಯಗಳ ಮಂತ್ರಿಗಳು ಹೇಳಿಕೆ ಕೊಟ್ಟಿರುವುದನ್ನು ತಾವು ನೋಡಿದ್ದೀರಿ. ಕರ್ನಾಟಕದ ಪರ್ ಕ್ಯಾಪಿಟಾ ಇನ್‌ಕಂ ೮೦೦ ರೂಪಾಯಿ ಆದರೆ, ಪಂಜಾಬಿನದು ೧,೪೭೨ ರೂಪಾಯಿ. ಮಹಾರಾಷ್ಟ್ರದ್ದು ೧,೪೭೦ ರೂಪಾಯಿ, ಹರಿಯಾಣದ್ದು ೧,೨೧೭ ರೂಪಾಯಿ, ಗುಜರಾತಿನದು ೧,೦೩೮ ರೂಪಾಯಿ, ಆಂಧ್ರ ಪ್ರದೇಶದ್ದು ೧,೦೦೩ ರೂಪಾಯಿ, ಪಶ್ಚಿಮ ಬಂಗಾಳದ್ದು ೧,೮೪೧ ರೂಪಾಯಿ ಇದೆ. ನಮ್ಮಲ್ಲಿ ಅತ್ಯಂತ ಕಡಿಮೆ ಜನ ಸಾಂದ್ರತೆ ಇದ್ದಾಗ್ಯೂ ಕೂಡ ನಮ್ಮ ಪರ್ ಕ್ಯಾಪಿಟಾ ಇನ್‌ಕಂ ಕೇವಲ ೮೦೦ ರೂಪಾಯಿಗಳು. ಕೇಂದ್ರ ಸರ್ಕಾರ ನಮ್ಮನ್ನು ಯಾವ ರೀತಿ ನೋಡಿದೆ ಎಂಬುದನ್ನು ನೋಡಿದರೆ, ಅದು ನಮ್ಮ ರಾಜ್ಯಕ್ಕೆ ಇನ್‌ವೆಸ್ಟ್ ಮಾಡಿರುವುದು ಬಹಳ ಕಡಿಮೆ. ಬಿಹಾರಕ್ಕೆ ೪೪೫ ಕೋಟಿ ರೂಪಾಯಿಗಳು, ಮಧ್ಯ ಪ್ರದೇಶಕ್ಕೆ ೩೫೮ ಕೋಟಿ ರೂಪಾಯಿಗಳು, ವೆಸ್ಟ್ ಬೆಂಗಾಳಕ್ಕೆ ೧೭೩ ಕೋಟಿ ರೂಪಾಯಿಗಳು, ಒರಿಸ್ಸಾಕ್ಕೆ ೨೯೫ ಕೋಟಿ ರೂಪಾಯಿಗಳು, ಗುಜರಾತಿಗೆ ೧೯೬ ರೂಪಾಯಿಗಳು, ಮಹಾರಾಷ್ಟ್ರಕ್ಕೆ ೧.೨೫ ಕೋಟಿ ರೂಪಾಯಿಗಳು ಹಾಗೂ ಕರ್ನಾಟಕಕ್ಕೆ ಬರೀ ೯೨ ಕೋಟಿ ರೂಪಾಯಿಗಳು. ನಮ್ಮ ಮಂಗಳೂರಿನ ಬಂದರು ಸಲುವಾಗಿ ೧೨೫ ಕೋಟಿ ರೂಪಾಯಿ ಬಂದರೆ ಸ್ವಲ್ಪವಾದರೂ ಬಂದ ಹಾಗೆ ಆಗುತ್ತದೆ. ವಿಜಯನಗರ ಉಕ್ಕಿನ ಕಾರ್ಖಾನೆಗೆ ಬೇಕಾದಷ್ಟು ಬಂದರೆ ಬರಬಹುದು. ಒಟ್ಟಿನಲ್ಲಿ, ನಾವು ಅತ್ಯಂತ ಕೆಳಗಿನ ಸ್ಥಾನದಲ್ಲಿದ್ದೇವೆ. ಕೇಂದ್ರ ಸರ್ಕಾರ ಅದು ಮಾಡುತ್ತದೆ ಇದು ಮಾಡುತ್ತದೆಂದು ಹೇಳುತ್ತಿದ್ದೇವೆ. ಆದರೂ ಕೂಡ ಯಾವ ನಿರೀಕ್ಷಣೆಯೂ ಕಾಣುತ್ತಿಲ್ಲ, ನಮ್ಮ ರಾಜ್ಯವನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಅಲಕ್ಷ್ಯ ಮಾಡಿದೆ ಎಂದು ಇಷ್ಟು ಮಾತ್ರ ಹೇಳಬಹುದು.

ಇನ್ನು ಸಾರಿಗೆ ಸೌಲಭ್ಯದ ಬಗ್ಗೆ ಹೇಳುವುದಾದರೆ. ಆ ಒಂದು ವ್ಯವಸ್ಥೆಯನ್ನು ನೋಡಿದರೆ ನಾಚಿಕೆ ಯಾಗುತ್ತದೆ. ತಮ್ಮ ಏರಿಯಾದಲ್ಲಿ ಯಾವ ರೀತಿ ಇದೆಯೋ ಗೊತ್ತಿಲ್ಲ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನು ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದಾರೆಂದರೆ, 'ಎಕ್ಸ್‌ಪ್ರೆಸ್ ಸರ್ವಿಸ್, ಡಿಲಕ್ಸ್ ಮತ್ತು ಸೆವಿ -ಲಕ್ಸುರಿ ಸರ್ವಿಸ್‌ಗಳ ಸಂಖ್ಯೆಯನ್ನಷ್ಟೇ ಅಲ್ಲದೆ ಅಂತರರಾಜ್ಯ ಮಾರ್ಗಗಳ ವಾಹನ ಸೌಕರ್ಯವನ್ನೂ ಹೆಚ್ಚಿಸಲಾಗಿದೆ. ಹಾಗೂ ಇಪ್ಪತ್ತಮೂರು ಬಸ್ ನಿಲ್ದಾಣಗಳು ನಿರ್ಮಾಣಗೊಳ್ಳುತ್ತಿವೆ. ಎಂದು. ಆದರೆ ನನಗೆ ಪ್ರಯಾಣ ಮಾಡಲಿಕ್ಕೆ ಮಾತ್ರ ಬಸ್ ಇಲ್ಲ ಮತ್ತು ಇದ್ದ ಬಸ್‌ನಲ್ಲಿ ಸರಿಯಾಗಿ ಬೆಂಗಳೂರನ್ನು ತಲುಪುತ್ತೇನೆಂಬ ನಂಬಿಕೆಯೂ ಇಲ್ಲ. ಆದರೂ ಕೂಡ, ಇಂತಹ ತಳಕು ಮಾತುಗಳನ್ನು ಏತಕ್ಕೆ ಮಾತನಾಡಬೇಕು ? ಎಷ್ಟೇ ಕಷ್ಟವಾದರೂ, ಏನಾದರೂ ಮಾಡಿ ಸಾಲವನ್ನಾದರೂ ತಂದು ಬಸ್ ಸರ್ವೀಸ್ ಅನ್ನು ಸುಧಾರಿಸುತ್ತೇವೆಂದು ಹೇಳುವುದು ಬಿಟ್ಟು, ಬರೀ ದೊಡ್ಡ ದೊಡ್ಡ ಮಾತುಗಳನ್ನು ಮಾತನಾಡಿರುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ಇದನ್ನು ಹೇಗೆ ಸಮರ್ಥಿಸುವುದು ಎಂದು ಕೇಳುತ್ತೇನೆ ? ಸುಮ್ಮನೆ ನಾವು ಆಡಂಬರದ ಮಾತುಗಳನ್ನು ಆಡಿ ಸಮಾಧಾನಪಟ್ಟುಕೊಳ್ಳಬಹುದು, ಆದರೆ ಅದು ಸರಿಯಲ್ಲ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ತಮಿಳುನಾಡಿನಲ್ಲಿ ೧೯೭೭–೭೮ರಲ್ಲಿ ಎಲ್ಲ ಗ್ರಾಮಗಳಿಗೂ ವಿದ್ಯುತ್ ಸೌಕರ್ಯವನ್ನು ಒದಗಿಸಿದ್ದಾರೆ. ಆದರೆ ನಾವು ಇನ್ನೂ ಶೇಕಡ ೫೬ ರಲ್ಲಿದ್ದೇವೆ. ಎಲ್ಲವನ್ನು ಹೇಳುತ್ತಾರೆ. ಸಂಖ್ಯೆಗಳನ್ನು ಕೊಡುತ್ತಾರೆ ಆದರೆ ಆ ಒಂದು ಸೌಕರ್ಯವನ್ನು ಹೆಚ್ಚು ಮಾಡಲಿಕ್ಕೆ ಏನು ಮಾಡಿದ್ದಾರೆಂದು ಕೇಳುತ್ತೇನೆ. ನನಗೆ ನೆನಪಿದ್ದ ಹಾಗೆ ಶರಾವತಿ ವಿದ್ಯುತ್‌ನಿಂದ ಇಡೀ ರಾಜ್ಯಕ್ಕೆ ವಿದ್ಯುತ್ ಒದಗಿಸುವುದಲ್ಲದೆ ನೆರೆ ರಾಜ್ಯಗಳಿಗೆ ಕೂಡ ವಿದ್ಯುತ್ ಒದಗಿಸುತ್ತೇವೆಂದು ಒಂದು ಸಂದರ್ಭದಲ್ಲಿ ಹೇಳಿದ ಪ್ರಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ಈಗ ನಾವು ಎಲ್ಲಿದ್ದೇವೆ? ಕೇರಳದಿಂದ, ಮದ್ರಾಸ್‌ನಿಂದ ಹೀಗೆ ಎಲ್ಲ ಕಡೆಗಳಿಂದ ಬೇಡಿ ತಂದು ವಿದ್ಯುತ್ ಒದಗಿಸುವ ದುರ್ದೈವ ನಮಗೆ ಇವತ್ತಿನ ದಿವಸ ಒದಗಿಬಂದಿದೆ.

ಇನ್ನಾದರೂ ಕೂಡ ಇದರ ಬಗ್ಗೆ ಹೆಚ್ಚಿನ ಆಧ್ಯತೆ ಕೊಟ್ಟು ವಿದ್ಯುತ್ತಿನಲ್ಲಿ ಸ್ವಾವಲಂಬಿಯಾಗುವಂಥ ಕೆಲಸ ಮಾಡಬೇಕು. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನನ್ನ ಸರ್ಕಾರವು ರಾಜ್ಯದಲ್ಲಿ ಸಹಕಾರ ಪದ್ಧತಿಯನ್ನು ಬಲಗೊಳಿಸಲು ಮತ್ತು ವಿಸ್ತರಿಸಲು ಕ್ರಮ ಕೈಗೊಳ್ಳಲಿದೆ ಎಂದು ಹೇಳಿದ್ದಾರೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ಮುಖ್ಯ ಮಂತ್ರಿಗಳಾಗಿ ಶ್ರೀಮಾನ್ ಗುಂಡೂರಾಯರಿದ್ದಾರೆ. ಇವರು ಮುಖ್ಯ ಮಂತ್ರಿಯಾಗುವುದಕ್ಕೆ ಮಾನ್ಯ ಶ್ರೀಕಂಠಯ್ಯನವರು ಸಂಪೂರ್ಣವಾದ ಸಹಾಯ, ಸಹಕಾರವನ್ನು ಕೊಟ್ಟಿದ್ದಾರೆ. ಇವರು ಸಹಕಾರ ಕೊಟ್ಟಿದ್ದಕ್ಕಾಗಿ ಇವರನ್ನು ಸಹಕಾರ ಮಂತ್ರಿಯಾಗಿ ಮಾನ್ಯ ಮುಖ್ಯ ಮಂತ್ರಿಗಳು ನೇಮಕ ಮಾಡಿದರು. ಇವರು ಸಹಕಾರ ಮಂತ್ರಿಯಾದ ತಕ್ಷಣ ಮೊದಲ ಗದಾ ಪ್ರಹಾರ ಮಾಡಿದ್ದು ಸಹಕಾರ ಚಳುವಳಿ ಮೇಲೆ. ವಿಠಲದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ಎಂದು ಇದೆ. ಆದರ ಕಾರ್ಯದರ್ಶಿ ಲಕ್ಷಾಂತರ ರೂಪಾಯಿಗಳನ್ನು ವಂಚಿಸಿದ. ಅಕೌಂಟ್‌ಗಳನ್ನು ಹಾಳು ಮಾಡಿ ಫೋರ್ಜರಿ ಮಾಡಿ ಮಾಡಬಾರದ ಅನಾಹುತ ಮಾಡಿದ. ಅಲ್ಲಿಯ ಡೈರೆಕ್ಟರುಗಳು ಇವನನ್ನು ಸಸ್ಪೆಂಡ್ ಮಾಡಿದರು. ಆದಕ್ಕೆ ಸಹಕಾರ ಮಂತ್ರಿಗಳು ಮಾಡಿದ ಒಳ್ಳೆಯ ಕೆಲಸವೆಂದರೆ, ಅವನಿಗೆ ಸಂಪೂರ್ಣ ರಕ್ಷಣೆ ಕೊಟ್ಟು ಅಮಾನತ್ತನ್ನು ಸ್ಟೇ ಆಗುವಂತೆ ಮಾಡಿದರು. ಈಗ ಈ ವಿಷಯ ಹೈಕೋರ್ಟಿನಲ್ಲಿದೆ. ಆದ್ದರಿಂದ ಹೆಚ್ಚಿಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಸಹಕಾರ ಮಂತ್ರಿಗಳೂ ಸಹಕಾರೀ ರಂಗದಲ್ಲಿ ನಡೆಯುವಂಥ ಬ್ರಷ್ಟಾಚಾರಕ್ಕೆ ಪೋಷಣೆ ಮಾಡಿದರೆ ಯಾವ ರೀತಿ ಸಹಕಾರ ರಂಗದಲ್ಲಿ ಬೆಳವಣಿಗೆಯಾಗುತ್ತದೆ? ಈ ರೀತಿಯ ಕೆಲಸ ಮಾಡಿಕೊಂಡು ಹೋದರೆ, ಸಹಕಾರ ಪದ್ಧತಿಯನ್ನು ಬಲಗೊಳಿಸುವುದು ಹಾಗೂ ವಿಸ್ತರಿಸುವುದಿರಲಿ, ಸಹಕಾರ ಪದ್ಧತಿಯು ಸರ್ವನಾಶವಾಗುವುದಕ್ಕೆ ಎಲ್ಲ ಕೆಲಸ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಮಾತನಾಡುವುದೊಂದು ಆಚರಣೆಯಲ್ಲಿ ಮಾಡುವುದೊಂದು ಇರಬಾರದು ಎಂದು ಹೇಳುತ್ತಿದ್ದೇನೆ. ಇವರ ಒಳಜಗಳ ಎಷ್ಟರ ಮಟ್ಟಿಗೆ ಕೆಳಗಿನ ಮಟ್ಟಕ್ಕೆ ಹರಡಿದೆ ಎಂಬುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ನಮ್ಮ ಪುತ್ತೂರಿನಲ್ಲಿ ಒಂದು ಕಾರ್ಯಕ್ರಮ ಇತ್ತು. ಅದೇನೆಂದರೆ, ಪುತ್ತೂರು ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ತಾಲ್ಲೂಕು ಮಟ್ಟದ ಪಂಚಾಯತ್‌ರಾಜ್ ಸಮ್ಮೇಳನ ಏರ್ಪಡಿಸಿ ಉದ್ಘಾಟನಾ ಸಮಾರಂಭವನ್ನು ಇಟ್ಟುಕೊಂಡಿದ್ದರು. ಕರ್ನಾಟಕದ ಅರಣ್ಯ ಮತ್ತು ಆಹಾರ ಸಚಿವರಾಗಿದ್ದ ಶ್ರೀ ಕಾಗೋಡು ತಿಮ್ಮಪ್ಪನವರು ರಾಜ್ಯಸಭಾ ಸದಸ್ಯರಾದ ಶ್ರೀ ಇಬ್ರಾಹಿಂ ಅವರು, ಜಗನ್ನಾಥರಾವ್ ಅವರು ಉದ್ಘಾಟನಾ ಸಮಾರಂಭಕ್ಕೆ ಬರುವರೆಂದೂ ಸಮಾರೋಪ ಸಮಾರಂಭಕ್ಕೆ ಶ್ರೀಮಾನ್ ವೀರಪ್ಪ ಮೊಯಿಲಿಯವರು, ಬೇಗಾನೆ ರಾಮಯ್ಯನವರು, ಜನಾರ್ಧನ ಪೂಜಾರಿಯವರು ಬರುವರೆಂದು ಆಹ್ವಾನಪತ್ರಿಕೆ ಅಚ್ಚಾಗಿತ್ತು. ಆದರೆ ಇವರಲ್ಲಿ ಒಬ್ಬರಾದರೂ ಮುಖ ತೋರಿಸಬೇಡವೆ? ಇದರ ಜೊತೆಗೆ ಕೆ. ರಾಮಭಟ್, ವಿಧಾನಸಭಾ ಸದಸ್ಯರು, ರಾಮಚಂದ್ರ, ವಿಧಾನಸಭಾ ಸದಸ್ಯರು, ಸೂಳ್ಯ. ಇವರು ಸಮ್ಮೇಳನದಲ್ಲಿ ಭಾಗವಹಿಸುವರು ಎಂದು ಹಾಕಿದ್ದಾರೆ. ಈ ಸಮ್ಮೇಳನವನ್ನು ಏರ್ಪಾಟು ಮಾಡಿದವರು ಪುತ್ತೂರು ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರು, ಇವರು ಮಾಡಿದ ಪಂಚಾಯತ್‌ರಾಜ್ ಸಮ್ಮೇಳನಕ್ಕೆ ಒಬ್ಬರೇ ಒಬ್ಬ ಮಂತ್ರಿಯಾದರೂ ಬರಬೇಕಲ್ಲ? ಒಬ್ಬರೂ ಬರಲಿಲ್ಲ. ಕಾರಣ ಏನೆಂದರೆ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಭಟ್ಟರು ಹೊಸದಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರು. ಅವರನ್ನು ಮುಂದೆ ಬರುವುದಕ್ಕೆ ಬಿಡಬಾರದು ಎಂದು ಕಾಂಗ್ರೆಸ್‌ನಲ್ಲಿ ಯಾರು ಆಸೀನರಾಗಿದ್ದಾರೋ ಅವರು ಉದ್ದೇಶಪೂರ್ವಕವಾಗಿ ಸಮ್ಮೇಳನಕ್ಕೆ ಬರದಂತೆ ಈ ರೀತಿ ಮಾಡಿದ್ದು ಒಂದು ದುರ್ದೈವ ಎಂದು ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ.

ಶ್ರೀ ಪಿ. ರಾಮ್‌ದೇವ್.—ಇವರು ಪಂಚಾಯತ್‌ರಾಜ್ ಸಮ್ಮೇಳನಕ್ಕೆ ಹೋಗಿ ಫಜೀತಿಗೆ ಸಿಕ್ಕಿ ಹಾಕಿಕೊಂಡರು.

ಶ್ರೀ ಬೇಗಾನೆ ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ರಾಮಭಟ್ಟರು ನೇರವಾದ ಆಪಾದನೆಗಳನ್ನು ಮಾಡುತ್ತಿದ್ದಾರೆ. ಇದು ಸತ್ಯಕ್ಕೆ ಬಹಳ ದೂರವಾದ ವಿಷಯ. ಆವತ್ತಿನ ದಿವಸ ತುರ್ತಾಗಿ ಒಂದು ಸಭೆಗೆ ಹೋಗಬೇಕಾದ ಪ್ರಯುಕ್ತ ಮಂತ್ರಿಗಳು ಯಾರೂ ಆ ಸಮಾರಂಭಕ್ಕೆ ಹೋಗುವುದಕ್ಕಾಗಲಿಲ್ಲ. ಉದ್ದೇಶಪೂರ್ವಕವಾಗಿ ಏನೂ ಮಾಡಲಿಲ್ಲ. ಆದರೆ ಮಾನ್ಯ ಸದಸ್ಯರು ಇಲ್ಲಿ ಒಂದು ತರಹ ಬಣ್ಣ ಕಟ್ಟಿ ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಸತ್ಯಕ್ಕೆ ದೂರವಾದ ವಿಷಯ.

ಶ್ರೀ ಕೆ. ರಾಮಭಟ್.—ತಮಗೇನಾದರೂ ಅನಿವಾರ್ಯ ಕಾರಣ ಇರಬಹುದು. ಮಂತ್ರಿಗಳಲ್ಲಿ ಒಬ್ಬರಾದರೂ ಬರಬೇಕಲ್ಲ. ಒಬ್ಬರೂ ಬರಲಿಲ್ಲವೆಂದರೆ ಹೇಗೆ? ಸಂಬ್ರಹ್ಮಣ್ಯದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದರು. ಅವರು ಬರದಂತೆ ತಡೆದರು. ಈ ರೀತಿ ರಾಜ್ಯಭಾರ ಮಾಡಿದರೆ ಕೆಳಗಿನ ಮಟ್ಟದಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ನಡೆಯುತ್ತದೆ ಎಂಬುದನ್ನು ಯೋಚನೆ ಮಾಡಿ ಎಂದು ಹೇಳುತ್ತಿದ್ದೇನೆ. ನಾನು ಏನು ಹೇಳುತ್ತಿದ್ದೇನೆಂದರೆ, ಬರುತ್ತೇವೆಂದು ಒಪ್ಪಿಕೊಂಡು ಈ ರೀತಿ ಅಪಹಾಸ್ಯಕ್ಕೆ ಗುರಿ ಮಾಡಬೇಡಿ ಎಂದು. ನೀವು ಸಮಾರಂಭಕ್ಕೆ ಬರುತ್ತೇವೆಂದು ಒಪ್ಪಿಗೆ ಕೊಟ್ಟಿದ್ದು ಏತಕ್ಕೆ, ಒಪ್ಪಿಗೆ ಕೊಟ್ಟಮೇಲೆ ಬರುವುದಿಲ್ಲ ಎಂದು ಏತಕ್ಕೆ ಹೇಳುತ್ತೀರಿ?

ಶ್ರೀ ಬೇಗಾನೆ ರಾಮಯ್ಯ —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಭಟ್ಟರಿಗೆ ಗೊತ್ತಿದೆ, ನಾನು ಯಾವುದೇ ಸಭೆಗೆ ಒಪ್ಪಿಕೊಂಡರೆ ಎಷ್ಟೇ ಕಷ್ಟವಾದರೂ ಪ್ರಾಮಾಣಿಕವಾಗಿ ಹೋಗುತ್ತೇನೆ. ಹಿಂದೆ ಕೂಡ ಪುತ್ತೂರಿಗೆ ಹೋಗಿ ಬಂದಿದ್ದೇನೆ. ಉದ್ದೇಶಪೂರ್ವಕವಾಗಿ ಹೋಗಬಾರದು ಎಂದು ತಪ್ಪಿಸಿಕೊಂಡಿಲ್ಲ. ಅವರು ಹೇಳಿದಂತೆ ಬೇರೆ ಯಾವ ಉದ್ದೇಶವೂ ನಮಗಿಲ್ಲ, ಆ ವಿಷಯ ನನಗೆ ಗೊತ್ತೂ ಇಲ್ಲ. ಹಿಂದೆ ಇದೇ ಅಧ್ಯಕ್ಷರು ಇದ್ದಂಥ ಅನೇಕ ಕಾರ್ಯಕ್ರಮಗಳಲ್ಲಿ, ಭಾಗವಹಿಸಿ ಬಂದಂಥ ಸಂದರ್ಭದಲ್ಲಿ ಮಾನ್ಯ ಭಟ್ಟರೂ ಇದ್ದರು. ನಾನು ಮತ್ತು ಕಾಗೋಡು ತಿಮ್ಮಪ್ಪನವರೂ ಇಬ್ಬರೂ ಏಕಕಾಲದಲ್ಲಿ ಹೋಗಲಿಲ್ಲ ಎಂದರೆ ಅದಕ್ಕೆ ಕಾರಣ ತುರ್ತಾಗಿ ಕೆಲಸ ಇದ್ದದ್ದು. ತಾವು ಅನ್ಯಥಾ ಹೇಳಬೇಡಿ.

ಶ್ರೀ ಕೆ. ರಾಮಭಟ್.—ನೀವು ನನ್ನೊಟ್ಟಿಗೆ ಬರುವುದಕ್ಕೆ ತಯಾರಿದ್ದೀರಿ. ಆದರೆ ತಮ್ಮ ಪಾರ್ಟಿಯ ಒಳಗಡೆ ಇರುವ ಜಗಳ ಎಷ್ಟು ಪ್ರಕೋಪಕ್ಕೆ ಹೋಗಿದೆ ಎಂಬುದನ್ನು ಹೇಳುತ್ತಿದ್ದೇನೆ. ನೀವು ಜಗಳ ಮಾಡಿ, ನನಗೇನಿಲ್ಲ. ಇನ್ನೊಂದು ಉದಾಹರಣೆ ಹೇಳುವುದಾದರೆ, ಸೂಳ್ಯದಲ್ಲಿ ಒಂದು ಆಸ್ಪತ್ರೆಯ ಉದ್ಘಾಟನೆಗೆ ಶ್ರೀ ಬೇಗಾನೆ ರಾಮಯ್ಯನವರು ಒಪ್ಪಿಕೊಂಡಿದ್ದರು. ಜನರು ಮಂತ್ರಿಗಳು ಬರುತ್ತಾರೆಂದು ಕಾದಿದ್ದರು. ಆದರೆ ಇವರು ಇತರ ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ಈ ಕಾರ್ಯಕ್ರಮಕ್ಕೆ ಹೋಗಲಿಲ್ಲ. ಒಪ್ಪಿಕೊಳ್ಳುವುದು ಏತಕ್ಕೆ, ಒಪ್ಪಿಕೊಂಡ ಮೇಲೆ ಈ ರೀತಿ ಮಾಡುವುದು ಏತಕ್ಕೆ? ನಾನು ಇವರ ಜಗಳವನ್ನು ಹೈಲೈಟ್ ಮಾಡುವುದಕ್ಕೆ ಹೇಳುತ್ತಿಲ್ಲ. ಈ ರೀತಿ ಮಾಡಿದರೆ ನಿಮ್ಮ ಆಡಳಿತದ ಬಗ್ಗೆ ನಂಬಿಕೆಯನ್ನು ಕಳೆದುಕೊಳ್ಳುತ್ತೀರಿ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ರೀತಿ ಯಾದರೆ ಪರಿಣಾಮ ಏನಾಗುತ್ತದೆ.....

ಉಪಾಧ್ಯಕ್ಷರು.—ದಯವಿಟ್ಟು ತಾವು ತಮ್ಮ ಭಾಷಣ ಮುಗಿಸಿ,

ಶ್ರೀ ಕೆ. ರಾಮಭಟ್.—೬ ಗಂಟೆಗೆ ಇನ್ನು ೧೦ ನಿಮಿಷ ಇದೆ. ಈ ೧೦ ನಿಮಿಷದಲ್ಲಿ ಬೇರೆ ಯಾರು ಮಾತನಾಡುತ್ತಾರೆ? ಅದನ್ನೂ ನನಗೇ ಕೊಟ್ಟುಬಿಡಿ. ಅತ್ಯಂತ ಗಂಭೀರವಾದ ಪ್ರಕರಣಗಳು ನಮ್ಮ ರಾಜ್ಯದಲ್ಲಿ ನಡೆಯುವುದನ್ನು ಹೇಳುತ್ತಿದ್ದೇನೆ. ಶೋರಾಪುರದಲ್ಲಿ ಇತ್ತೀಚೆಗೆ ಒಂದು ಪ್ರಕರಣ ನಡೆಯಿತು ಅಲ್ಲಿ ವಲ್ಲಭಭಾಯ್ ಪಟೇಲ್ ಅವರ ಪ್ರತಿಮೆ ಸ್ಥಾಪನೆ ಮಾಡಿದ್ದನ್ನು ತೆಗೆದುಹಾಕಿ ಅಲ್ಪಸಂಖ್ಯಾತರಿಗೆ ಪೂಜಾಸ್ಥಾನ ಕಲ್ಪಿಸಬೇಕು ಎಂದು ಮಾನ್ಯ ಸಚಿವರಾದ ಶ್ರೀಮಾನ್ ಇಬ್ರಾಹಿಂ ಅವರ ಪ್ರೇರಣೆಯಿಂದ...

SRI QUMARAL ISLAM.—Sir, I raise a point of order. Originally there was a mosque in Shorapura town. He has taken up a very sensitive issue which was already solved by the Government order. In this House the way in which he is bringing up again may result to building up of tension. We know in Karnataka what is happening. Shimoga is burning. We do not want to bring up such issues.

DY. SPEAKER. —There is no point of order. Please continue.

ಶ್ರೀ ಕೆ. ರಾಮಭಟ್.—ದಕ್ಷ ಮತ್ತು ಸ್ವಚ್ಛ ಆಡಳಿತವನ್ನು ಕೊಡಬೇಕಾದವರು ಈ ರೀತಿ ಜಾತೀಯತೆಗೆ ಪ್ರಚೋದನೆ ಮಾಡುತ್ತಾ ಹೋದರೆ ಊರಿಗೆ ಬೆಂಕಿ ಬೀಳುತ್ತದೆ. ಇದೇ ಮಂತ್ರಿಗಳು ಶೋರಾಪುರದಲ್ಲಿ ಇದೇ ಸ್ಥಾನದಲ್ಲಿ ಮಸೀದಿ ಸ್ಥಾಪನೆ ಮಾಡಬೇಕೆಂದು ಹಣ ಸ್ಯಾಂಕ್ಷನ್ ಮಾಡಿದ್ದಾರೆ. ಈ ರೀತಿ ಜಾತೀಯತೆಗೆ ಪ್ರೋತ್ಸಾಹ ಕೊಡುವವರನ್ನು ಮಂತ್ರಿಗಳಾಗಿ ಇಟ್ಟುಕೊಳ್ಳುವುದು ಯಾವ ನ್ಯಾಯ? ಹಿಂದೂಗಳಾಗಲೀ. ಮುಸಲ್ಮಾನರಾಗಲೀ ಎಲ್ಲರೂ ಒಂದೇ. ನಾನು ಯಾವುದೇ ಒಂದು ಕೆಟ್ಟ ಭಾವನೆಯನ್ನೂ ಹೊಂದಿಲ್ಲ. ಆದರೆ ಈ ರಾಜ್ಯದಲ್ಲಿ ಜಾತೀಯತೆಗಾಗಿ ನಡೆಯುವ ಹೋರಾಟವನ್ನು ಖಂಡಿಸುತ್ತೇನೆ. ವಲ್ಲಭಾಯ್ ಪಟೇಲ್ ಅವರ ಪ್ರತಿಮೆಯನ್ನು ತೆಗೆದು.....

SRI QUMARUL ISLAM.—What is there in Basava Kalyan.

ಶ್ರೀ ಕೆ. ರಾಮಭಟ್.—ಶಿಕಾರಿಪುರದಲ್ಲಿ ಗಲಾಟೆಯಾಯಿತು: ಶಿರಾಳಕೊಪ್ಪದಲ್ಲಿ ಗಲಾಟೆಯಾಯಿತು. ಎಷ್ಟು ಜನ ಅಪರಾಧಿಗಳನ್ನು ಬಂಧಿಸಿದ್ದೀರಿ? I do not understand why he is agitating for every word I utter. You have to face the facts today or tomorrow. I also respect the place of worship.

SRI QUMARUL ISLAM —I do agree he was a national leader, but his statue cannot be placed in a mosque or mandir. That is the place of Bhagavan or Lord.

ಶ್ರೀ ಕೆ. ರಾಮಭಟ್.—ನಾನು ಯಾರ ಭಾವನೆಗೂ ನೋವನ್ನುಂಟು ಮಾಡಬೇಕೆಂದು ಮಾತನಾಡುತ್ತಿಲ್ಲ. ನಾನು ದುಃಖದಿಂದ ಮಾತನಾಡುತ್ತಿದ್ದೇನೆ. ಮಂತ್ರಿಗಳಾದವರೇ ಪ್ರೇರೇಪಣೆ ಮಾಡಿ ಜಾತಿ ವಿಷಬೀಜವನ್ನು ಬಿತ್ತುತ್ತಿದ್ದಾರೆ. ನಾನಿದನ್ನು ಯಾರ ಸಂತೋಷ ಅಥವಾ ಸಮಾಧಾನಕ್ಕೆ ಹೇಳುತ್ತಿಲ್ಲ. ರಾಜ್ಯದಲ್ಲಿ ಈ ರೀತಿಯಾದರೆ ಮುಂದೇನು ಗತಿ ಎಂದು ಹೇಳುತ್ತಿದ್ದೇನೆ. ಕೋಲಾರ ಜಿಲ್ಲೆಯ ಗೋರಿಬಿದನೂರಿನಲ್ಲಿ ಬಾಂಬ್ ಸ್ಫೋಟವಾಯಿತು. ಬಾಂಬ್ ಪತ್ತೆ ಮಾಡಿ ಏನು ಕ್ರಮ ತೆಗೆದು ಕೊಂಡಿರಿ? ಪೋಲಿಸರನ್ನು ಹೆಚ್ಚಿಸುವುದರಿಂದ ಅಥವಾ ಪೋಲಿಸ್ ಅಧಿಕಾರಿಗಳನ್ನು ಹೆಚ್ಚಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಯಾರು ಯಾರು ಇಂತಹ ಅಪರಾಧಗಳನ್ನು ಮಾಡುತ್ತಿದ್ದಾರೆ ಮತ್ತು ದೇಶದ್ರೋಹಿ ಕೆಲಸಗಳಲ್ಲಿ ನಿರತರಾಗಿದ್ದಾರೆ ಅವರನ್ನು ತಕ್ಷಣ ಹಿಡಿದು ಕ್ರಮ ಕೈಗೊಳ್ಳಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಭಾಷಣವನ್ನು ಜಾಗ್ರತೆ ಮುಗಿಸಬೇಕು.

ಶ್ರೀ ಕೆ. ರಾಮಭಟ್.—ರೈತರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಭಾರತೀಯ ಜನತಾ ಪಕ್ಷಕ್ಕೆ ರೈತರ ಬಗ್ಗೆ ಸಹಾನುಭೂತಿ ಇದೆ. ರೈತರ ಬೇಡಿಕೆಗಳನ್ನು ಸರ್ಕಾರ ಒಪ್ಪಬೇಕೆಂದು ಒತ್ತಾಯ ಪಡಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ವಿ. ಪತ್ತಾರ್ (ಜಮಖಂಡಿ) —ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ನಿರ್ಣಯವನ್ನು ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನು ಆಡಲು ಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಸಯನಕ್ ಅವರು ದೇವದಾಸಿ ಪದ್ಧತಿ ರದ್ದತಿ ಕಾಯಿದೆ ಕುರಿತು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮತ್ತು ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಕಳೆದ ಸಲ ಇದೇ ಸದನದಲ್ಲಿ ನಾನು ಈ ಬಗ್ಗೆ. ಮಾತನಾಡಿ ಸರ್ಕಾರದ ಹಾಗೂ ಪೋಲಿಸರ ಗಮನವನ್ನು ದೇವದಾಸಿ ಪದ್ಧತಿ ರದ್ದತಿ ಕಾಯಿದೆ ಕಡೆಗೆ ಎಳೆದಿದ್ದೆನು. ಈ ಕಾಯಿದೆ ಪ್ರಚಲಿತವಾಗಿದ್ದರೂ ಪೋಲಿಸರು ಯಾವ ಕ್ರಮವನ್ನೂ ಕೈಗೊಳ್ಳದಿದ್ದುದು ವಿಷಾದಕರ ಸಂಗತಿಯಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು, ಹೆಣ್ಣು ಮಕ್ಕಳಿಗೆ ಒಂದು ಉದಾತ್ತವಾದ ಕೊಡುಗೆಯನ್ನು ಕೊಡಬೇಕೆಂದಿದ್ದರೆ, ಅವರು ದಯವಿಟ್ಟು ದೇವದಾಸಿ ರದ್ದತಿ ಕಾಯಿದೆಯನ್ನು ಕಡ್ಡಾಯವಾಗಿ ಜಾರಿಯಲ್ಲಿ ತರಬೇಕು. ಈ ಪದ್ಧತಿ ಸಮಾಜಕ್ಕೊಂದು ಕಳಂಕ. ಮಾನ್ಯ ಮುಖ್ಯ ಮಂತ್ರಿಗಳು ದಕ್ಷರಾಗಿದ್ದಾರೆ. ಅವರು ದಯವಿಟ್ಟು ಈ ಸಮಸ್ಯೆ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

SRI A. LAKSHMISAGAR.—Sir, I want to know from Sri Pattar whether the Bombay Act is still in force in view of the Central Act, *viz.*, Suppression of Immoral Traffic Act in Women and Children?

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಲಕ್ಷ್ಮೀಸಾಗರ್ ಅವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅವರು ತಿಳಿಸಿದ ಕೇಂದ್ರ ಕಾಯಿದೆಯು ಹೆಲವಾರು ರೀತಿಯಲ್ಲಿ ಬೇರೆಯಾಗಿದೆ. ಅದರ ಕಲಂಗಳೂ ಮತ್ತು ಇದರ ಕಲಂಗಳೂ ಬೇರೆ ಬೇರೆಯಾಗಿವೆ. Suppression of Immoral Traffic Act ಇಡೀ ಸಮಾಜಕ್ಕೆ ಅನ್ವಯಿಸುವ ಕಾಯಿದೆ. ಆದರೆ, ದೇವದಾಸಿ ಪದ್ಧತಿ ರದ್ದತಿ ಕಾಯಿದೆ ದೇವದಾಸಿ ವೃತ್ತಿಯಲ್ಲಿರುವವರಿಗೆ ಮಾತ್ರ ಅನ್ವಯಿಸುವ ಕಾಯಿದೆ. ಮಾನ್ಯ ಸಯನಕ್ ಅವರು ಗಡಿ ಸಮಸ್ಯೆ ಸಲುವಾಗಿ ವಿನಾಕಾರಣವಾದ ವಾದವನ್ನು ಮಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಈ ಗಡಿ ಸಮಸ್ಯೆ ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಬಹುಶಃ ಈ ಸದನ ಆದಕ್ಕೆ ಮಂಗಳ ಹಾಡಿದೆ ಎಂದು ಹೇಳಿದರೂ ತಪ್ಪಾಗಲಾರದು. ಮಹಾರಾಷ್ಟ್ರದ ಮಹಿಳೆ ಶ್ರೀಮತಿ ಕೇಲ್ಕರ್ ಅವರು ೧೯೨೮ನೇ ಇಸವಿಯಲ್ಲಿ ಸಲ್ಲಿಸಿದ ವರದಿಯಲ್ಲಿ ಬೆಳಗಾವಿ ಕರ್ನಾಟಕದದ್ದೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಫಜಲ್ ಅಲಿ ಆಯೋಗ ಕೂಡ ೧೯೫೬ ರಲ್ಲಿ ಇದೇ ವಾದವನ್ನು ಪುಷ್ಟೀಕರಿಸಿದೆ. ಇದರಿಂದ ಸಂತೋಷಗೊಳ್ಳದ ಮಹಾರಾಷ್ಟ್ರೀಯರು ಮಹಾಜನ್ ಆಯೋಗ ನೇಮಕಕ್ಕೆ ಕಾರಣೀಭೂತರಾದರು. ಕರ್ನಾಟಕದ ಜನತೆ ಮತ್ತು ಸರ್ಕಾರ ಮಹಾಜನ್ ಆಯೋಗವನ್ನು ನೇಮಿಸ ಬಾರದೆಂದು ವಾದ ಮಾಡಿದಾಗ್ಯೂ ಮಹಾರಾಷ್ಟ್ರೀಯರ ಒತ್ತಾಯದ ಮೇರೆಗೆ ಆಯೋಗವನ್ನು ನೇಮಿಸಿದರು. ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಮಹಾಜನ್ ಅವರು ತೀರ್ಪು ಕೊಟ್ಟರು. ಬೆಳಗಾವಿ ಕರ್ನಾಟಕದ್ದೇ ಎಂದರು. ಆದರೂ ಸಹ ಮಾನ್ಯ ಸಯನಕ್ ಅವರು ಮೊಂಡು ವಾದವನ್ನು ಮಾಡುತ್ತಿರುವರು. ಇದು ಅತ್ಯಂತ ದುರಾದೃಷ್ಟ. ಕರ್ನಾಟಕದಲ್ಲಿ ಇನ್ನೂ ಕನ್ನಡದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರದಿರುವುದು ದುರಾದೃಷ್ಟಕರ ಸಂಗತಿಯಾಗಿದೆ. ಮಹಾರಾಷ್ಟ್ರದಲ್ಲಿ ಮರಾಠಿಯನ್ನು ಕಡ್ಡಾಯ ಶಿಕ್ಷಣವನ್ನಾಗಿ ಮಾಡಿದ್ದಾರೆ. ಮಾನ್ಯ ಸಯನಕ್ ಅವರು ಗಡಿ ವಿವಾದದ ಬಗ್ಗೆ ಮಾಡುತ್ತಿರುವ ವಾದದಲ್ಲಿ ಹುರುಳಿಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಸಣ್ಣ ಕೈಗಾರಿಕೆಗಳ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. ಒಕ್ಕಾಲುತನ ಕುರಿತು ಅನೇಕ ಸದಸ್ಯರು ಪ್ರಾತನಾಡಿದ್ದಾರೆ. ನೇಕಾರರ ಪ್ರಶ್ನೆಯೂ ಇಲ್ಲಿ ಪ್ರಮುಖವಾಗಿದೆ. ಒಕ್ಕಾಲುತನದ ನಂತರ ನೇಯ್ಗೆ ಉದ್ದಿಮೆ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಸರ್ಕಾರದವರು ಹಲವಾರು ಪರಿಹಾರಗಳನ್ನು ನೇಕಾರರ ವರ್ಗಕ್ಕೆ ಕೊಟ್ಟಿದ್ದರೂ ಸಹ ಅವರ ದುಸ್ಥಿತಿ ಹೇಳತೀರದು. ನೇಕಾರರು, ಅದರಲ್ಲೂ ಕೈಮಗ್ಗ ನೇಕಾರರು ಬಡತನದ ರೇಖೆಯ ಕೆಳಗಡೆ ಇರುವ ಜನ. ಮೂರು ಜನ ಹನ್ನೆರಡು ತಾಸಿನವರೆಗೆ ನೇಯ್ದರೆ ಅವರಿಗೆ ಸಿಕ್ಕುವುದು ದಿವಸಕ್ಕೆ ಕೇವಲ ೭–೮ ರೂಪಾಯಿಗಳು ಮಾತ್ರ. ಅಂದರೆ, ಒಬ್ಬ ಮನುಷ್ಯನಿಗೆ ಎರಡು ರೂಪಾಯಿಗಳಿಗಿಂತ ಹೆಚ್ಚು ಪರಮಾನವಿಲ್ಲ. ಇಂತಹ ವಿಶಿಷ್ಟ ದುಸ್ಥಿತಿಯಲ್ಲಿರುವ ಜನರಿಗೆ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಅದಲ್ಲದೆ, ನಮ್ಮ ಪ್ರಧಾನ ೨೦ ಅಂಶಗಳ ಕಾರ್ಯಕ್ರಮದಲ್ಲಿ ೯ನೇ ಅಂಶ ಈ ಉದ್ಯೋಗದ ಸಲುವಾಗಿ ಹೆಚ್ಚು ಮಹತ್ವ ಕೊಡಬೇಕೆಂದು ವಿವರಿಸಿದೆ. ಆದರೆ, ಒಂದು ಮಾತನ್ನು ದುರಾದೃಷ್ಟವೆಂದು ನಾನು ಹೇಳಬೇಕಾಗಿದೆ. ಅದೇನೆಂದರೆ, ೧೯೬೧ ನೇ ಇಸವಿಯ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ೧,೩೭,೦೦೦ ಕೈಮಗ್ಗಗಳಿದ್ದವು.

೬—೦೦ ಪಿ.ಎಂ.

(ಅಧ್ಯಕ್ಷರು ಪೀಠದಲ್ಲಿದ್ದರು)

ದುರ್ದೈವದಿಂದ ೧೯೭೬ರಲ್ಲಿ ನಡೆದ ಗಣತಿ ಪ್ರಕಾರ ಒಂದು ಲಕ್ಷ ಎರಡು ಸಾವಿರದ ಎಂಟುನೂರು ಮೂವತ್ನಾಲ್ಕು ಮಗ್ಗಗಳು ಇವೆ. ಅಂದರೆ ದಿನೇ ದಿನೇ ಈ ಉದ್ಯೋಗ ಕುಂದುತ್ತಾ ನಡೆದಿದೆ. ಈ ರೀತಿ ಕಡಿಮೆಯಾಗುವುದಕ್ಕೆ ಕಾರಣ ಏನು ಅಂದರೆ ಈ ಉದ್ಯೋಗವನ್ನು ಲಾಭದಾಯಕವಾಗಿ ಮಾಡುವತ್ತಾ, ಸರ್ಕಾರ ವಿವೇಕಯುತವಾದ ಕ್ರಮ ತೆಗೆದುಕೊಂಡಿಲ್ಲದೇ ಇರುವುದು. ಈ ವಿಷಯವನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ನಿಮಗೆ ಇನ್ನು ಎಷ್ಟು ವೇಳೆ ಬೇಕು ?

ಶ್ರೀ ವಿ.ವಿ. ಪತ್ತಾರ್.—೧೦–೧೫ ನಿಮಿಷ ಬೇಕಾಗುತ್ತೆ.

ಅಧ್ಯಕ್ಷರು.— ಇನ್ನು ೫ ನಿಮಿಷದಲ್ಲಿ ಮುಗಿಸಿ.

ಶ್ರೀ ವಿ.ವಿ. ಪತ್ತಾರ್.—೧೫ ನಿಮಿಷ ಕೊಡಿ ಸ್ವಾಮಿ.

ಅಧ್ಯಕ್ಷರು.—ಅದನ್ನು ನಿಮ್ಮ ವಿಪ್ ಹತ್ತಿರ ಮಾತನಾಡಿ.

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ರಿಸರ್ವೇಷನ್ ಆರ್ಡರ್ ಮಾಡಿದ್ದಾರೆ. ಕೈಮಗ್ಗಗಳು ಬದುಕಬೇಕಾದರೆ, ಬಣ್ಣದ ಬಟ್ಟೆಗಳನ್ನು, ಬಣ್ಣದ ಸೀರೆಗಳನ್ನು ವಿದ್ಯುತ್ ಚಾಲಿತ ಮಗ್ಗಗಳಲ್ಲಿ ತಯಾರು ಮಾಡುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕೆಂದು ಆರ್ಡರ್ ಮಾಡಿದ್ದಾರೆ. ಈ ಆಜ್ಞೆಯನ್ನು ಬಾಂಬೆ ಟೆಕ್ಸ್‌ಟೈಲ್ ಕಮೀಷನ್ ಆರ್ಡರ್ ೧೯೬೨ರಲ್ಲಿ ಜಾರಿಯಲ್ಲಿ ಬಂತು. ಕೈಮಗ್ಗಗಳಿಗೆ ಮೀಸಲಾತಿ ಇಡುವುದರಿಂದ ಅವುಗಳಂ ಶಕ್ತಿಯುತವಾಗಿ ಉತ್ಕೃಷ್ಟವಾಗಿ ಬೆಳೆಯುತ್ತವೆ. ಆದರೆ, ಕಳೆದ ೧೧ ವರ್ಷಗಳಿಂದ ವಿದ್ಯುತ್‌ಚಾಲಿತ ಮಗ್ಗಗಳ ಮಾಲೀಕರು ಮಿಸಲಾತಿ ಕಾಯಿದೆಯನ್ನು ಕೋರ್ಟುಗಳಿಗೆ ಹಾಕಿ, ವಿನಾಕಾರಣ ತೊಂದರೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಕರ್ನಾಟಕ ಹೈಕೋರ್ಟಿನಲ್ಲಿ, ಸುಪ್ರೀಂ ಕೋರ್ಟಿನಲ್ಲಿ ವಿಚಾರ ಇಟ್ಟಿದ್ದಾಯಿತು. ಮತ್ತೆ ಕರ್ನಾಟಕ ಹೈಕೋರ್ಟಿನಲ್ಲಿ ರಿಟ್ ಅಪೀಲುಗಳ ಮೂಲಕ ಇಟ್ಟು ಮುಗಿಸಿದ್ದಾಯಿತು. ಆದರೂ ಎಲ್ಲೂ ಕೂಡ ಅವರಿಗೆ ಅನುಕೂಲವಾಗಿಲ್ಲ. ಆದರೂ ಈ ಮೀಸಲಾತಿ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಿಲ್ಲ. ಕಾರಣ ಇದರಿಂದ ನಿರುದ್ಯೋಗ ಸಮಸ್ಯೆ ಉದ್ಭವವಾಗುತ್ತದೆ! ಇದರಿಂದ ಅಶಾಂತಿ ಉಂಟಾಗುತ್ತದೆಂದು ಇದನ್ನು ಜಾರಿಯಲ್ಲಿ ತರಲಿಲ್ಲ. ಸ್ವಾಮಿ, ನನ್ನ ಕ್ಷೇತ್ರದಲ್ಲಿ ೧೧,೦೦೦ ಕೈಮಗ್ಗಗಳು, ೫,೦೦೦ ವಿದ್ಯುತ್‌ಚಾಲಿತ ಮಗ್ಗಗಳು ಇವೆ, ನಾನು ಈ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೀಸಲಾತಿ ಕಾಯಿದೆಯನ್ನು ಜಾರಿಗೆ ತರುವುದರಿಂದ ಯಾವುದೇ ರೀತಿಯ ಅಶಾಂತಿಯಾಗಲೀ, ನಿರುದ್ಯೋಗ ಸಮಸ್ಯೆಯಾಗಲೀ ಆಗುವುದಿಲ್ಲ. ತಕ್ಕಮಟ್ಟಿಗೆ ನಿರುದ್ಯೋಗ ಸಮಸ್ಯೆ ಆಗಬಹುದು; ಹಿಂದೆ ಮಾಡಿದಂತೆ ೧೦ ಅಂಶಗಳ ಕಾರ್ಯಕ್ರಮದಲ್ಲಿ ಇದೂ ಒಂದು ಇದೆ, ಇದನ್ನು ಸರ್ಕಾರ ಒಪ್ಪಿಕೊಂಡಿದೆ. ಏನು ಅಂದರೆ ವಿದ್ಯುತ್‌ಚಾಲಿತ ಮಗ್ಗಗಳನ್ನು ಪುರಸ್ಕರಿಸುವ ಸಲುವಾಗಿ ಪವರ್‌ಲೂಮ್ ಕಾರ್ಪೊರೇಷನ್ ಮಾಡಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿತ್ತು. ಅದನ್ನು ಸರ್ಕಾರ ಮಾಡಿದರೆ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬಹುದು. ಅತ್ಯಂತ ಬಡತನದ ರೇಖೆಯ ಕೆಳಗೆ ಇರತಕ್ಕ ನೇಕಾರರ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ. ಆದ್ದರಿಂದ ನಾನು ಕೈಗಾರಿಕಾ ಮಂತ್ರಿಗಳಲ್ಲಿ ದಯಮಾಡಿ ಬಾಂಬೆ ಟೆಕ್ಸ್‌ಟೈಲ್ ಕಮೀಷನ್ ರಿಸರ್ವೇಷನ್ ಆರ್ಡರನ್ನು ಜಾರಿಗೆ ತರಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ; ಇದರ ಜೊತೆಗೆ ಪವರ್ ಲೂಮ ಕಾರ್ಪೊರೇಷನ್‌ನ್ನು ಕೂಡ ಮಾಡಬೇಕೆಂದು ಹೇಳಿ ನನಗೆ ಸಮಯ ಕಡಿಮೆ ಇರುವುದರಿಂದ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ANNOUNCEMENT BY THE SPEAKER :

MR. SPEAKER.—Here is an announcement. The Business Advisory Committee at a meeting held today have recommended the following programme of work for the House :

Friday 6-2-1981	...	The House may sit from 11-30 a.m. and there may be no Question Hour.
		Short Duration discussion on the scarcity conditions prevailing in some parts of the State for 2½ hours.
		Discussion on the Governor's Address from 2-00 p.m.